ಮಾಡಿ ತಾವು ಮಂಡಿಸಿರತಕ್ಕಂತಹ ಈ ಸಂತಾಪ ಸೂಚನೆಯಲ್ಲಿ ಸಹಮತಿಯನ್ನು ಸೂಚಿಸುವುದರ ಜೊತೆಗೆ ನನಗೆ ಮಾತನಾಡುವುದಕ್ಕೆ ಅವಕಾಶವನ್ನು ಮಾಡಿಕೊಟ್ಟಿದ್ದೀರಿ ಅದಕ್ಕಾಗಿ ತಮಗೆ ಧನ್ಯವಾದಗಳು.

ಅಧ್ಯಕ್ಷರು : ದಿವಂಗತರಾದ ಶ್ರೀ ಸಿ.ಬೋರಯ್ಯರವರಿಗೆ ಗೌರವ ಸೂಚಿಸುವ ಸಲುವಾಗಿ ಮಾನ್ಯ ಸದಸ್ಯರೆಲ್ಲರೂ ಎದ್ದು ನಿಂತು ಒಂದು ನಿಮಿಷಗಳ ಕಾಲ ಮೌನವನ್ನಾಚರಿಸಬೇಕೆಂದು ಕೇಳಿಕೊಳ್ಳುತ್ತೇನೆ.

(ಮೃತರ ಗೌರವಾರ್ಥ ಸದನದ ಎಲ್ಲಾ ಸದಸ್ಯರು ಎದ್ದು ನಿಂತು ಒಂದು ನಿಮಿಷ ಮೌನವನ್ನಾಚರಿಸಿದರು)

ಅಧ್ಯಕ್ಷರು : ಈ ಸದನವು ಅಂಗೀಕರಿಸಿದ ಸಂತಾಪ ಸೂಚಕ ನಿರ್ಣಯವನ್ನು ಮೃತರ ಕುಟುಂಬ ವರ್ಗದವರಿಗೆ ಕಳುಹಿಸಿಕೊಡಲಾಗುವುದು.

2) ವಿಷಯ:- ಛಾಪಾ ಕಾಗದದ ಹಗರಣದ ಚರ್ಚೆಗೆ ಸಂಬಂಧಪಟ್ಟಂತೆ

(ಈ ಹಂತದಲ್ಲಿ ಬಿಜೆಪಿ ಸದಸ್ಯರು ಧರಣಿಯನ್ನು ನಡೆಸಲು ಸದನದ ಬಾವಿಗೆ ಬಂದರು)

ಶ್ರೀ ಎಸ್.ಸುರೇಶ್‌ಕುಮಾರ್ (ರಾಜಾಜಿನಗರ):- ಮಾನ್ಯ ಅಧ್ಯಕ್ಷರೆ, ನಿನ್ನೆ ಇಲ್ಲಿ ಮಾನ್ಯ ಮಂತ್ರಿಗಳು ದೀರ್ಘವಾದ ಉತ್ತರವನ್ನು ಕೊಟ್ಟರು. ಮಾನ್ಯ ರೋಷನ್‌ಬೇಗ್‌ರವರು ಹಜ್‌ಗೆ ಹೋಗಿರುವ ಬಗ್ಗೆ ಎಲ್ಲಾ ಮಾಹಿತಿ ಕೊಟ್ಟಿದ್ದಾರೆ. ನನಗೆ ಬಂದಂತಹ ಖಚಿತವಾದಂತಹ ಮಾಹಿತಿಯನ್ನು ಸರ್ಕಾರದ ಮೂಲಕ ಸ್ಟಾಂಪಿಟ್‌ಗೂ ಹಾಗೂ ಸರ್ಕಾರಕ್ಕೂ ಕೊಡುತ್ತೇನೆ. ಮಾನ್ಯ ರೋಷನ್‌ಬೇಗ್‌ರವರ ವ್ಯವಹಾರಗಳನ್ನು ಅನೇಕ ಸಂಗತಿಗಳನ್ನು ನೋಡಿಕೊಳ್ಳುತ್ತಿದ್ದ ಬೆಂಗಳೂರು ಮಹಾನಗರಪಾಲಿಕೆಯ ಒಬ್ಬ ಕಾರ್ಪೊರೇಟರ್ ಕಳೆದ 8 ದಿವಸದಿಂದ ಅವರನ್ನೂ ಸಹ ಪೊಲೀಸ್‌ನವರು ಹುಡುಕುತ್ತಿದ್ದರು ಅವರು ಅಬ್‌ಸ್ಕಾಂಡ್ ಆಗಿದ್ದಾರೆ. ಶ್ರೀ ರೋಷನ್‌ಬೇಗ್‌ರವರ ಎಲ್ಲಾ ಟ್ರ್ಯಾನ್‌ಜ್ಯಕ್ಷನ್‌ನ್ನು ಅವರೇ ನೋಡಿಕೊಳ್ಳುತ್ತಿದ್ದರು. ಇವರು ಭಾರತವನ್ನು ಬಿಟ್ಟು ಓಡಿಹೋಗಿದ್ದಾರೆ. ಆ ಬೆಂಗಳೂರು ಮಹಾನಗರಪಾಲಿಕೆಯ ಸದಸ್ಯರನ್ನಾದರೂ ಕೂಡ ತಾವು ಹಿಡಿದು ತಮ್ಮ ಪ್ರಾಮಾಣಿಕತೆಯನ್ನು ತೋರಿಸುತ್ತೀರಾ? ಅದರ ಬಗ್ಗೆಯಾದರೂ ಕೂಡ ಉತ್ತರವನ್ನು ಕೊಡಿ.

ಅಧ್ಯಕ್ಷರು : ಈ ವಿಷಯ ನಿನ್ನೆಗೆ ಮುಗಿದಿದೆ, ಅದಕ್ಕೆ ಉತ್ತರ ಮತ್ತೆ ಹೇಳಬೇಕಾಗಿಲ್ಲ. ನಿನ್ನೇ ಮುಕ್ತಾಯವಾಗಿದೆ.

†ಶ್ರೀ ಬಿ. ಸೋಮಶೇಖರ್(ಮಳವಳ್ಳಿ) : ನಮ್ಮ ಪಕ್ಷದವರು ಸರ್ಕಾರದವರ ಮುಂದೆ ಅನೇಕ ಪ್ರಮುಖವಾದ ಪ್ರಶ್ನೆಗಳನ್ನು ಇಟ್ಟಿದ್ದೆವು. ಸದನದ ಕಲಾಪವನ್ನು ನಡೆಯದಂತೆ ಅಡ್ಡಿಪಡಿಸುವುದು ನಮ್ಮ ಉದ್ದೇಶವಲ್ಲ, ಸದನ ಯಾವಾಗಲೂ ನಿರಂತರವಾಗಿ ನಡೆದು ಮುಕ್ತ ಚರ್ಚೆಯಾಗಬೇಕು ಎಂಬುದು ನಮ್ಮ ಉದ್ದೇಶ. ನಾವು ಪ್ರಮುಖವಾದ ಪ್ರಶ್ನೆಗಳನ್ನು ಕೇಳಿದ್ದೆವು. ಆದರೆ ಇದಕ್ಕೆ ಸರ್ಕಾರದಿಂದ ಯಾವುದೇ ಉತ್ತರವಿಲ್ಲ. ಅವರು ಒಂದು ಪುಸ್ತಕವನ್ನು ಕೊಟ್ಟು ಉತ್ತರವನ್ನು ಓದಿದರು. ಅದರಲ್ಲಿ ಕೇಂದ್ರಸರ್ಕಾರಕ್ಕೆ, ಮಾನ್ಯಮುಖ್ಯಮಂತ್ರಿಗಳು, ಗೃಹಮಂತ್ರಿಗಳು ಬರೆದಂತಹ ಪತ್ರಗಳನ್ನು ಬಿಟ್ಟರೆ ಬೇರೆ ಯಾವುದೇ ವಿಚಾರಗಳಿಲ್ಲ. ರಾಜ್ಯ ಸರ್ಕಾರಕ್ಕೂ ಕೇಂದ್ರ ಸರ್ಕಾರಕ್ಕೂ ನಡುವೆ ನಡೆದಿರುವ 2-3 ಪತ್ರಗಳ ವಿಶ್ಲೇಷಣೆ ಬಿಟ್ಟರೆ ಬೇರೆ ಯಾವುದೇ ವಿರೋಧಪಕ್ಷದವರು ಎತ್ತಿದಂತಹ ವಿಚಾರಗಳಿಗೆ ಯಾವುದೇ ಉತ್ತರವಿಲ್ಲ. ನಾವು ಮೊದಲಿಗೆ ಮಾನ್ಯ ರೋಷನ್‌ಬೇಗ್ ಅವರ ರಾಜೀನಾಮೆ ಬಗ್ಗೆ ಕೇಳಿದಾಗ ನೀವು 2-3 ವರ್ಷಗಳಿಂದ ರಾಜೀನಾಮೆ ಕೊಡುವ ಅವಶ್ಯಕತೆಯಿಲ್ಲ, ಅವರು ತಪ್ಪಿತಸ್ಥರಲ್ಲ ಅಂತ ಹೇಳುತ್ತಿದ್ದು ತಕ್ಷಣ ವಿಧಾನಸಭೆ ಅಧಿವೇಶನ ಪ್ರಾರಂಭವಾಗುವ ಹಿಂದಿನ ದಿನ ರಾಜೀನಾಮೆ

ಪಡೆದುಕೊಂಡಿದ್ದೀರಿ; ಇದು ಊಹಾಪೋಹಕ್ಕೆ ಎಡೆ ಮಾಡಿದೆ. ಯಾವ ಕಾರಣಕ್ಕೋಸ್ಕರ ರಾಜೀನಾಮೆ ತೆಗೆದುಕೊಂಡಿರಿ ಎಂಬುದನ್ನು ನಾನು ಕೇಳುವುದಿಲ್ಲ, ಅದು ಮುಖ್ಯಮಂತ್ರಿಗಳ ವಿವೇಚನೆಗೆ ಬಿಟ್ಟಂತಹ ವಿಚಾರ ಇರಬಹುದು. ಆದರೆ ಈ ವಿಚಾರ ಇಡೀ ದೇಶದ ಗಮನಕ್ಕೆ ಬಂದಿದ್ದು, ಮಾನ್ಯ ರೋಷನ್‌ಬೇಗ್ ಇದರಲ್ಲಿ ಭಾಗಿಯಾಗಿರುವ ಬಗ್ಗೆ ಇಡೀ ದೇಶಕ್ಕೆ ಗೊತ್ತಿರುವುದರಿಂದ, ಅವರು ರಾಜೀನಾಮೆ ಕೊಡುವುದಿಲ್ಲ ಅಂತ ಹೇಳುವುದು, ರಾಜೀನಾಮೆ ಕೊಡುವ ಅವಶ್ಯಕತೆಯಿಲ್ಲವೆಂದು ನೀವು ಹೇಳುವುದು, ಇಷ್ಟೆಲ್ಲಾ ಇರುವಾಗ ಮತ್ತೆ ಅವರು ರಾಜೀನಾಮೆ ಕೊಟ್ಟಿದ್ದು, ಇದನ್ನು ನೀವು ನಮ್ಮ ಇಷ್ಟ ನಮಗೆ ಬಿಟ್ಟ ವಿಚಾರವೆಂದು ಎಂದು ಹೇಳುವುದು ಸರಿಯಲ್ಲ. ಪಕ್ಷದ ಕೆಲಸಕ್ಕೋಸ್ಕರ ಅವರನ್ನು ಉಪಯೋಗಿಸಿಕೊಳ್ಳುತ್ತಿದ್ದೇವೆಂದು ಹೇಳಿದಿರಿ, ಅದರಿಂದ ನೀವು ಇವರು ಯಾವುದೇ ರೀತಿಯಿಂದ ಭಾಗಿಯಾಗಿಲ್ಲ ಎನ್ನುವುದನ್ನು ಹೇಳಬೇಕು. ನಾವು ಅವರ ಸೇವೆಯನ್ನು ಪಕ್ಷಕ್ಕೆ ಉಪಯೋಗಿಸಿಕೊಂಡಿದ್ದೇವೆಂದು ಹೇಳಿದರೆ ಹೌದು ಇವರಿಗೆ ಪ್ರಮೋಷನ್ ಕೊಟ್ಟಿರಬಹುದೆಂದು ನಾವು ತಿಳಿದುಕೊಳ್ಳುತ್ತೇವೆ. ಅದನ್ನು ಹೇಳಿಲ್ಲ. ಮತ್ತೆ ಕೆಲವು ಮಂತ್ರಿಗಳು, ಅಧಿಕಾರಿಗಳು ಭಾಗಿಯಾಗಿದ್ದಾರೆಂಬ ರಿಪೋರ್ಟ್ ಇದೆ, ಈಗಾಗಲೇ ಸುಮಾರು 8–9 ಜನ ಮಂತ್ರಿಗಳು, ಅಧಿಕಾರಿಗಳು ಭಾಗಿಯಾಗಿದ್ದಾರೆ ಅಂತ ಇದೆ. ಆ ಅಧಿಕಾರಿಗಳ ಹೆಸರನ್ನು ನೋಡುವುದಾದರೆ ಏನು ಅನುಮಾನ ಬಂದಿರತಕ್ಕಂತಹ ಮಂತ್ರಿಗಳಿಂದ ರಾಜೀನಾಮೆ ತೆಗೆದುಕೊಂಡು ಪಕ್ಷಕ್ಕೆ ಹಾಕಿದ್ದೇವೆ ಅಂತ ಹೇಳುತ್ತೀರಿ. ಮತ್ತೊಂದು ಕಡೆ ಅಧಿಕಾರಿಗಳ ಹೆಸರು ಯಾರ್‍ಯಾರದ್ದು ಬಂದಿದೆ, ಅವರಿಗೆ ಪ್ರಮೋಷನ್ ಕೊಟ್ಟು ನೀವು ಒಂದೊಂದು ಸಮಿತಿಯನ್ನು ರಚನೆ ಮಾಡಿ ಮಂತ್ರಿಗಳ ಸ್ಥಾನವನ್ನು ಕೊಟ್ಟಿದ್ದೀರಿ ಮತ್ತು ಯಾವ ಡಿ.ವೈ.ಎಸ್.ಪಿ.ಗಳ ಯಾವ ಒಂದು ಸ್ಟೇಷನ್‌ನಲ್ಲಿ ಅವರು ಭಾಗಿಯಾಗಿದ್ದಾರೆಂದು ವರದಿಯಲ್ಲಿ ಬಂದಿದೆ. ಅವರು ಇನ್ಸ್‌ಪೆಕ್ಟರ್‌ಗಳಾಗಿ, ಡಿ.ವೈ.ಎಸ್.ಪಿ.ಗಳಾಗಿ ಅಲ್ಲೇ ನಾಲ್ಕೈದು ವರ್ಷಗಳ ಕಾಲ ಇದ್ದಾರೆ. ಇಂತಹವರಿಗೆ ಎಷ್ಟು ಸಾರಿ ನೀವು ಪ್ರೆಸಿಡೆಂಟ್ ಅವಾರ್ಡ್ ಕೊಟ್ಟಿದ್ದೀರಿ; ಇನ್ನು ಕೆಲವು ಪೊಲೀಸ್ ಅಧಿಕಾರಿಗಳಿಗೆ ಬರಲೇ ಇಲ್ಲ. ಅಂದರೆ ಇದೇ ಮೆರಿಟ್ ಅವರಿಗೆ! ಅಂದರೆ ಯಾರು ನಕಲಿ ಛಾಪಾ ಕಾಗದ ಮಾರಾಟದಲ್ಲಿ ಕರೀಂಲಾಲನ ಜೊತೆ ನಿಕಟವಾದ ಸಂಪರ್ಕ ಇಟ್ಟುಕೊಂಡಿದ್ದಾರೆ ಅಂಥವರಿಗೆ ಗೋಲ್ಡ್ ಮೆಡಲ್ ಕೊಡುವುದೇ ನಿಮ್ಮ ಸರ್ಕಾರದ ದೃಷ್ಟಿಕೋನವೇ? ಯಾರು ಡಿ.ಜಿ.ಪಿ. ಆಗಿ ನಿವೃತ್ತರಾದ ಮೇಲೂ ಅವರಿಗೆ ದೊಡ್ಡ ಸ್ಥಾನ ಕೊಟ್ಟು ಅವರಿಗೆ ಸನ್ಮಾನ ಮಾಡುವುದು. ಯಾರ್‍ಯಾರು ಇದರಲ್ಲಿ ಭಾಗಿಯಾಗಿದ್ದಾರೆ ಎಂಬುದಕ್ಕೆ ನೀವು ಉತ್ತರಿಸಿಲ್ಲ. ಇದನ್ನಾದರೂ ಹೇಳಿ, ನಮ್ಮ ಸರ್ಕಾರದ ನೀತಿ ಇದೇ, ಯಾರ್‍ಯಾರು ದೇಶದ್ರೋಹ ಮಾಡುತ್ತಾರೆ ಅವರಿಗೆ ಪುರಸ್ಕಾರ ಮಾಡುವುದೇ ನಮ್ಮ ದೃಷ್ಟಿಕೋನ ಎಂದು. ಈಗ ಕರೀಂಲಾಲನಿಗೂ ನೀವು ಭಾರತ ರತ್ನ ಪ್ರಶಸ್ತಿ ಕೊಡಲಿಕ್ಕೆ ನೀವು ರೆಕ್ಮೆಂಡ್ ಮಾಡಿ, ನಮ್ಮದೇನೂ ಅಭ್ಯಂತರವಿಲ್ಲ. ನೀವು ಇಷ್ಟೆಲ್ಲಾ ಮಾಡಿರುವವರು ಭಾರತರತ್ನ ಪ್ರಶಸ್ತಿ ಕೊಡಲಿಕ್ಕೆ ರೆಕ್ಮೆಂಡ್ ಮಾಡುವುದರಲ್ಲಿ ಏನೂ ಆಶ್ಚರ್ಯವಿಲ್ಲ. ಅದಕ್ಕೆ ಉತ್ತರವನ್ನು ತಾವು ಕೊಟ್ಟಿಲ್ಲ. ಮತ್ತೊಂದು ಈ ನಕಲಿ ಛಾಪಾ ಕಾಗದ 1999 ರಿಂದ ಎಲ್ಲಿ ಎಷ್ಟು ಮಾರಾಟವಾಗಿದೆಯೆಂಬ ಬಗ್ಗೆ ಅಂಕಿಅಂಶಗಳು ಕೊಡಬೇಕು ಮತ್ತು 2003ರಲ್ಲಿ ಪೇಪರ್‌ನಲ್ಲಿ ನೀವು ಏನು ಜಾರಿಗೆ ತಂದಿದ್ದೀರಿ ಅದನ್ನು 1999ರಲ್ಲಿ ಏತಕ್ಕೆ ಜಾರಿಗೆ ತರಲಿಲ್ಲ? ಇದಕ್ಕೆ ಸ್ಪಷ್ಟವಾದ ಉತ್ತರವನ್ನು ಕೊಡಬೇಕಾಗಿತ್ತು ತಾವು ಕೊಟ್ಟಿಲ್ಲ, ಇದಕ್ಕೆ ತಾವು ಉತ್ತರವನ್ನು ಕೊಡಲೇಬೇಕಾಗುತ್ತದೆ. ಮತ್ತೆ ತಾವೇ ಒಪ್ಪಿಕೊಂಡಿದ್ದೀರಿ 2 ವರ್ಷದಿಂದ ಅರೆಸ್ಟ್ ಮಾಡಿ ಜೈಲಿನಲ್ಲಿ ಇಟ್ಟ ಕರೀಂಲಾಲ ಮೊಬೈಲ್ ಸಂಪರ್ಕದಿಂದ...

ಅಧ್ಯಕ್ಷರು : ನಿನ್ನೆ ಇದನ್ನೆಲ್ಲಾ ಹೇಳಿದ್ದೀರಿ. ಹೇಳಿದ್ದೇ ಹೇಳಿದರೆ ಏನು ಪ್ರಯೋಜನ? You have raised the same question yesterday also.

ಶ್ರೀ ಬಿ. ಸೋಮಶೇಖರ್ : ಅದಕ್ಕೆ ಉತ್ತರ ಕೊಟ್ಟಿಲ್ಲ, ಅವರು ಅದಕ್ಕೆ ಉತ್ತರ ಕೊಟ್ಟುಬಿಡಲಿ. ನಾವು ಅವರಿಂದ ಹೀಗೆ ಉತ್ತರ ಕೊಡಲಿ ಅಂತಹ ಅಪೇಕ್ಷಿಸುವುದಿಲ್ಲ, ಹಾಗಾದರೆ ರಾಜೀನಾಮೆ ಕೊಟ್ಟ ಉದ್ದೇಶ ಏನು? ಮತ್ತೆ ಬೇರೆ ಯಾರು ಮಂತ್ರಿಗಳಿದ್ದಾರೆ, ಇಲ್ಲವೆಂದು ಹೇಳಲಿ, ಸುಮ್ಮನೆ ಯಾವುದೋ ಉತ್ತರ ಕೊಟ್ಟರೆ ಹೇಗೆ? ಬರೇ ಪತ್ರ ವ್ಯವಹಾರಗಳ ವಿಚಾರ ಹೇಳಿದರೆ ಹೇಗೆ? ನಾನು ಅಸಂಬದ್ಧ ವಿಚಾರವನ್ನು ಎತ್ತಿದರೆ ಬೇಡ.

ಅಧ್ಯಕ್ಷರು : 2003–2004 ರ ಸ್ಟಾಂಪ್ ಪೇಪರ್ ವಿವರ ಕೊಡುತ್ತೇವೆಂದು ಹೇಳಿದ್ದಾರಲ್ಲಾ?

ಶ್ರೀ ಬಿ. ಸೋಮಶೇಖರ್ : ಮಾನ್ಯ ರೋಷನ್ ಬೇಗ್ ಅವರು ಮೂರು ವರ್ಷಗಳಿಂದ ರಾಜೀನಾಮೆ ಕೊಡುವುದಿಲ್ಲ ಅಂತಹ ಹೇಳಿ ಈಗ ಕೊಟ್ಟಿರುವುದಕ್ಕಾದರೂ ಏಕೆ? ಕಾರಣ ಏನು ಎಂಬುದನ್ನು ಹೇಳಲಿ. ಅವರೇನೂ ಇನ್‌ವಾಲ್ವ್ ಆಗಿಲ್ಲ, ಪಕ್ಷಕ್ಕೋಸ್ಕರ ತೆಗೆದುಕೊಂಡಿದ್ದೇವೆ ಅಂತ ಹೇಳಲಿ. ಆ 9 ಜನ ಮಂತ್ರಿಗಳು ಯಾರೂ ಭಾಗಿಯಾಗಿಲ್ಲ ಎನ್ನುವ ನಿಜಾಂಶವನ್ನಾದರೂ ಹೇಳಲಿ ಅಧಿಕಾರಿಗಳು ಯಾರೂ ಭಾಗಿಯಾಗಿಲ್ಲ ಅನ್ನುವ ಬಗ್ಗೆ ಹೇಳಲಿ. ಅಥವಾ ಅಧಿಕಾರಿಗಳು ಭಾಗಿಯಾಗಿದ್ದರೆ ಅವರ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದೀರಿ ಎಂಬ ಬಗ್ಗೆ ಹೇಳಿ, ಇದಕ್ಕೆ ಸ್ಪಷ್ಟವಾದ ಉತ್ತರವನ್ನು ಹೇಳಲಿ ನಾವು ಇನ್ನೇನೂ ಕೇಳುವುದಿಲ್ಲ.

†ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ಅಧ್ಯಕ್ಷರೇ, ಮಾನ್ಯ ಗೃಹಸಚಿವರು ನಿನ್ನೆ ಕೊಟ್ಟಂತಹ ಉತ್ತರವನ್ನು ನಾವು ಒಪ್ಪದೇ ನಾವು ಎತ್ತಿರುವ ಅನೇಕ ಅಂಶಗಳಿಗೆ ಸರಿಯಾದ ಉತ್ತರವನ್ನು ಕೊಟ್ಟಿಲ್ಲವೆಂದು ಹೇಳಿ ನಾವು ನಿನ್ನೆ ಪ್ರತಿಭಾಟನೆ ಮಾಡಿ ಸಭಾತ್ಯಾಗ ಮಾಡಿದೆವು. ಈಗ ವಿರೋಧಪಕ್ಷದ ನಾಯಕರು ಕೆಲವು ಬೇಡಿಕೆಗಳನ್ನು ಹಾಗೂ ಒತ್ತಾಯಗಳನ್ನು ಮಾಡಿದ್ದಾರೆ. ಮಾನ್ಯ ಸೋಮಶೇಖರ್ ಕೆಲವು ವಿಚಾರಗಳ ಪ್ರಸ್ತಾಪಮಾಡಿದ್ದಾರೆ. ನಾನು ಈ ಸಂದರ್ಭದಲ್ಲಿ ಸರ್ಕಾರವನ್ನು ಕೇಳತಕ್ಕದ್ದು, ಬಹುಶಃ ಸ್ವಾತಂತ್ರ್ಯ ಬಂದ ನಂತರದ ದಿನಗಳಲ್ಲಿ ಇಷ್ಟೊಂದು ಭಾರಿ ಪ್ರಮಾಣದ ಅವ್ಯವಹಾರ ನಡೆದಿರತಕ್ಕಂಥ ಹಗರಣ ಬೇರೆ ಯಾವುದೂ ಸಹಿತ ಇಲ್ಲ. ಇಂತಹ ಸಂದರ್ಭದಲ್ಲಿ ರಾಜ್ಯಸರ್ಕಾರ ಯಾವರೀತಿ ನಡೆದುಕೊಳ್ಳಬೇಕಾಗಿತ್ತೋ ಆ ರೀತಿ ನಡೆದುಕೊಂಡಿಲ್ಲ. ರಾಜ್ಯಸರ್ಕಾರ ತಪ್ಪಿತಸ್ಥರ ಸ್ಥಾನದಲ್ಲಿ ನಿಂತಿದೆ ಎಂಬುದನ್ನು ಸ್ಪಷ್ಟವಾಗಿ ಮನಗಂಡಂತೆ ಈ ಉತ್ತರದಲ್ಲಿ ಕಾಣಲಿಲ್ಲ. ಮಾನ್ಯ ಸೋಮಶೇಖರ್ ಹೇಳಿದ ಹಾಗೆ ಈ ಒಂದು ಶ್ವೇತಪತ್ರ ಅಂತ ಕರೀತಾರೋ; ವರದಿ ಅಂತ ಕರೀತಾರೋ; ಅಂಕಿಅಂಶಗಳ ಪುಸ್ತಕ ಅಂತ ಕೊಟ್ಟಿದ್ದಾರೋ ಅಥವಾ ಜನಗಳನ್ನು ಚುನಾವಣೆ ಹತ್ತಿರ ಬರುತ್ತಿದೆ ಅಂತ ತಪ್ಪು ಮಾಹಿತಿ ಸಾಕಷ್ಟು ಇದರ ಬಗ್ಗೆ ಪ್ರಚಾರವಾಗಿದೆ, ಇದನ್ನು ತಡೆಗಟ್ಟಲಿಕ್ಕೆ ಈ ಅಂಕಿ ಅಂಶಗಳನ್ನು ಕೊಟ್ಟಿದ್ದಾರೋ ಯಾರು ಇದನ್ನು ಬೇಡಿಕೆ ಮಾಡಿದರೋ ಎನ್ನುವುದು ನನಗೆ ಗೊತ್ತಿಲ್ಲ. Anyway ಅವರು ಕಾಗದಗಳನ್ನು ಬರೆದಿರುವ ಬಗ್ಗೆ ಹೇಳಿ ಮಾನ್ಯ ಖರ್ಗೆಯವರು ಉತ್ತರ ಕೊಡುವಾಗ ಇವರಿಗೆ ಇವರ ಬೆನ್ನನ್ನು ಕೇಂದ್ರ ಸರ್ಕಾರದ ಹಣಕಾಸಿನ ಸಚಿವರು ತಟ್ಟಿದ ಹಾಗೆ ಅಥವಾ ಬಿ.ಜೆ.ಪಿ. ಶಿವಸೇನೆ ಮುಖಂಡರು ಅವರ ಜೊತೆಯಲ್ಲಿ ಫೋಟೋ ಇದ್ದುದ್ದನ್ನು ತೋರಿಸಿ ಅದರಲ್ಲಿ ರಕ್ಷಣೆ ಪಡೆದುಕೊಳ್ಳಲಿಕ್ಕೆ, ಇವರ ಅಕ್ರಮಗಳನ್ನು ಮುಚ್ಚಿಕೊಳ್ಳಲಿಕ್ಕೆ, ಈ ಸರ್ಕಾರದ ವೈಫಲ್ಯಗಳನ್ನು ಮುಚ್ಚಿಕೊಳ್ಳಲಿಕ್ಕೆ ಪ್ರಯತ್ನ ಮಾಡಿದ್ದಾರೆಯೇ ಹೊರತು ಸತ್ಯಾಂಶಗಳನ್ನು ಹೊರಗಡೆ ಇಡುವುದರಲ್ಲಿ ಮಾನ್ಯ ಖರ್ಗೆಯವರು ಯಶಸ್ವಿಯಾಗಿಲ್ಲ, ಈಗ 2–3 ವರ್ಷಗಳ ನಂತರ ಜೈಲಿನಲ್ಲಿ

ನಡೆದಿರುವ ಅಕ್ರಮಗಳ ಬಗ್ಗೆ, ಈಗ ಪೊಲೀಸ್‌ನವರು ಅರೆಸ್ಟ್ ಮಾಡಿ ಅವರನ್ನೆಲ್ಲಾ ವಿಚಾರಣೆ ಮಾಡುತ್ತಿದ್ದಾರೆ. ಈ ವೈಫಲ್ಯತೆಯನ್ನು ಸರ್ಕಾರ ಒಪ್ಪಿಕೊಳ್ಳಬೇಕೋ, ಬಿಡಬೇಕೋ; ಸರ್ಕಾರ ಒಪ್ಪಿಕೊಳ್ಳಲೇಬೇಕು. Yes, we have failed ಇಷ್ಟು ದೊಡ್ಡ ಹಗರಣ ಇರುವಾಗ ಕರೀಂಲಾಲನಿಗೆ ಯಾವುದೇ ರೀತಿಯಲ್ಲೂ ನಿಮಗೆ ಸಂಬಂಧವಿಲ್ಲದೆ ಹೋಗಿದ್ದರೆ, ನಿಮ್ಮ ಅಧಿಕಾರಿಗಳಿಂದ ಅವನಿಗೆ ಪುರಸ್ಕಾರ ಸಿಗದೇ ಇದ್ದಿದ್ದರೆ ಅವನ ಚಟುವಟಿಕೆಗಳು ಜೈಲಿನಲ್ಲಿ ಹೇಗೆ ನಡೆಯುತ್ತಿತ್ತು? ಇದು ಜನಗಳಲ್ಲಿರುವ ಸಂಶಯವಾಗಿದೆ. ಇದನ್ನು ತಾವು ನಿವಾರಣೆ ಮಾಡಬೇಕು. ಈಗ ತಾವು ಒಂದು ಮಾತು ಹೇಳಿದಿರಿ, ಮಾನ್ಯ ಸಿಂಧ್ಯರವರು ಹೇಳಿದರು ಅದನ್ನು ನಾನು ಪರಿಶೀಲನೆ ಮಾಡುತ್ತೇನೆ ಅಂತ. ಅದು ಸಾಕಾಗುವುದಿಲ್ಲ. ಇವತ್ತು ಜೈಲಿನಲ್ಲಿ ಇದಕ್ಕೆ ಸಂಬಂಧಪಟ್ಟ ಹಾಗೆ ಬಹಳ ಜನ ಇಬ್ಬರು ಮೂವರನ್ನು ಈಗಾಗಲೇ ದಸ್ತಗಿರಿ ಮಾಡಿದ್ದಾರೆ. ಅದರಲ್ಲೂ ಸಹಿತ ವ್ಯಾಪಕವಾಗಿ ವಿಧನಸೌಧದಿಂದಲೂ ಸಹ ಅಧಿಕಾರಿಗಳ ಮಟ್ಟದಿಂದ ಸೂಚನೆಗಳು ಹೋಗಿವೆ ಎನ್ನುವ ಮಾತುಗಳನ್ನು ನಾನು ಕೇಳಿದ್ದೇನೆ. ಇದರ ಬಗ್ಗೆ ತನಿಖಾ ತಂಡದವರು ಮಾಡತಕ್ಕಂಥದ್ದು ಒಂದು ಕೆಲಸ ಆಯಿತು, ಕೋರ್ಟಿನ ಮುಂದೆ ಹೋಗುವಂತಹದು ಮತ್ತೊಂದು ಕೆಲಸವಾಯಿತು. ಆಗ ಸರ್ಕಾರ ಫೈಲ್ಯೂರ್ ಆಗಿಲ್ಲವೇ? ಆ ವೈಫಲ್ಯತೆಯನ್ನು ನೀವು ಒಪ್ಪಿಕೊಳ್ಳಬೇಕು. ಅದನ್ನು ಸರಿಮಾಡಲಿಕ್ಕೆ ನೀವು ಕ್ರಮವನ್ನು ತೆಗೆದುಕೊಳ್ಳಬೇಕಲ್ಲವೇ? ಇದು ಬಹಳ ಮುಖ್ಯವಾಗಿರತಕ್ಕಂತಹ ಪ್ರಶ್ನೆ. ಮತ್ತೆ ಮಹಾರಾಷ್ಟ್ರದಲ್ಲಿ ಅವನು ಹೋಗಿದಂತಹ ಸನ್ನಿವೇಶದಲ್ಲಿ ಮಹಾರಾಷ್ಟ್ರ ಪೊಲೀಸರು ಅವನಿಗೆ ರಾಜ್ಯಾತಿಥ್ಯವನ್ನು ಸ್ವೀಕಾರ ಮಾಡಲಿಕ್ಕೆ ಅವಕಾಶ ಮಾಡಿಕೊಟ್ಟಿದ್ದರು, ಅವನನ್ನು ಜೈಲಿನಲ್ಲಿಡದೆ ಯಾವುದೋ ಗೆಸ್ಟ್‌ಹೌಸ್‌ನಲ್ಲಿ ನಡೆಸುತ್ತಿದ್ದರು ಅಂತ ಹೇಳಿ ಮಹಾರಾಷ್ಟ್ರ ಸರ್ಕಾರವನ್ನು ನೀವು ಟೀಕೆ ಮಾಡುವುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಅಲ್ಲಿ ಯಾವುದೇ ಪಕ್ಷ ಆಡಳಿತ ನಡೆಸಿದರೂ ಅದು ತಪ್ಪು. ಇದನ್ನು ನೀವು ನಿನ್ನೆವರೆಗೂ ಏತಕ್ಕೆ ಬಹಿರಂಗಪಡಿಸಲಿಲ್ಲ? ಇದನ್ನು ಈ ರೀತಿ ಮಾಡುತ್ತಿದ್ದಾರೆ ಎಂದು ನೀವು ಬಹಿರಂಗಪಡಿಸಬಹುದಿತ್ತು. ಈ ರೀತಿಯ ಅನೇಕ ಗೊಂದಲಗಳು ಉಂಟಾಗಿರುವುದರ ಜೊತೆಗೆ ಇವತ್ತು ಪತ್ರಿಕೆಗಳಲ್ಲಿ ಬಹಳ ಪ್ರಮುಖವಾಗಿ ಇದರಲ್ಲಿ ಕೆಲವರ ಕೈವಾಡವಿದೆ ಅಂತದ್ದು ಮಾನ್ಯ ಜಗದೀಶ್ ಶೆಟ್ಟರ್ ಅವರು, ಮಾನ್ಯ ಯಡಿಯೂರಪ್ಪನವರು ಕೆಲವು ಅಂಕಿಅಂಶಗಳನ್ನು ಕೊಟ್ಟಿರುವುದನ್ನು ನಾವು ಮನಗಂಡಿದ್ದೇವೆ.

11.00 ಎಎಂ.

ಸರ್ಕಾರದ ಹತ್ತಿರ ಏನೋ ಒಂದು ಮಾಹಿತಿ ಇದರ ಬಗ್ಗೆ ಇದ್ದೇ ಇರುತ್ತದೆ. ವಿಚಾರಣಾ ತಂಡದಲ್ಲಿ ಎಲ್ಲವನ್ನೂ ಸಹಿತ ವಿಚಾರಣೆ ಮಾಡಿರುತ್ತಾರೆ. ಆದರೆ ಅದನ್ನು ಜನರಿಗೆ ತಿಳಿಸತಕ್ಕಂಥ ಅವಶ್ಯಕತೆ ಬಹಳ ಇದೆ. ಜನರಿಗೆ ನೀವು ಇದನ್ನು ತಿಳಿಸಬೇಕಾಗುತ್ತದೆ. ಜನರಿಗೆ ಇದನ್ನು ತಿಳಿಸದೇ ಹೋದರೆ ಇದು ಪ್ರಜಾಪ್ರಭುತ್ವದಲ್ಲಿ ಸರಿಯಾದ ಕ್ರಮ ಅಲ್ಲ. ಆದ್ದರಿಂದ ಇದನ್ನು ಎರಡನೇಯದಾಗಿ ಮಾಡಬೇಕಾಗುತ್ತದೆ. ಇನ್ನು ಮೂರನೇಯದಾಗಿ ಬಹಳ ಪ್ರಮುಖವಾಗಿ ನಮಗೆ ಏನು ಅನ್ನಿಸುತ್ತದೆ ಎಂದರೆ ಸಾಮಾನ್ಯವಾದ ಒಬ್ಬ ಓದುಗನಿಗೆ, ಒಬ್ಬ ಸಾಮಾನ್ಯವಾದ ಮನುಷ್ಯನಿಗೆ ಏನೋ ಸರ್ಕಾರ ಮುಚ್ಚಿಡಲಿಕ್ಕೆ ಪ್ರಯತ್ನ ಮಾಡುತ್ತಿದೆ ಎನ್ನತಕ್ಕಂಥಾದ್ದು ಆಗುತ್ತಿದೆ. ಆದ್ದರಿಂದ ಈ ಒಂದು ಎರಡು–ಮೂರು ಪ್ರಶ್ನೆಗಳು ಏನಿವೆ, ಇದಕ್ಕೆ ಸಮಂಜಸವಾದ ಉತ್ತರವನ್ನು ಸರ್ಕಾರದವರು ಕೊಡಬೇಕು. ಮತ್ತೆ ಮಾನ್ಯ ಮಂತ್ರಿಗಳು ಯಾರು ರಾಜೀನಾಮೆಯನ್ನು ಕೊಟ್ಟಿದ್ದಾರೆ, ಅದಕ್ಕೆ ಸಂಬಂಧಪಟ್ಟ ಹಾಗೆ ಈಗ ಮತ್ತೊಂದು ಮಾಹಿತಿಯನ್ನು ಮಾನ್ಯ ಸುರೇಶ್‌ಕುಮಾರ್ ಅವರು ಇವತ್ತು ಕೊಟ್ಟಿದ್ದಾರೆ.

ಅದರ ಬಗ್ಗೆ ಸರ್ಕಾರ ಇಷ್ಟು ದಿವಸ ಏನು ಮಾಡುತ್ತಿತ್ತು? ಅದನ್ನು ಏಕೆ ನೀವು ತಿಳಿಸಲಿಲ್ಲ? ಅದು ನಿಮ್ಮ ಗಮನಕ್ಕೆ ಬಂದಿರಲಿಲ್ವಾ? ಅವರ ಆಸ್ತಿಪಾಸ್ತಿ ವಿವರಗಳು ನಿಮ್ಮ ಗಮನಕ್ಕೆ ಬಂದಿರುವುದಿಲ್ಲವೇನು? ಲೋಕಾಯುಕ್ತ ಇಲ್ಲವೇ? ಅದು ಯಾರೋ ಒಬ್ಬ ಇಂಡುವಿಜ್ಯುಯಲ್ ಅಂತ ಇದ್ದರೆ ಪರವಾಗಿರಲಿಲ್ಲ, ಆದರೆ ಇವತ್ತು ಮುಖ್ಯಮಂತ್ರಿಗಳು ಮನಸ್ಸು ಮಾಡಿದರೆ ಲೋಕಾಯುಕ್ತರಿಂದ ಅವರ ಆಸ್ತಿಪಾಸ್ತಿಗಳ ಬಗ್ಗೆ ವಿವರಗಳನ್ನು ತೆಗೆದುಕೊಳ್ಳಬಹುದು. ಅಧ್ಯಕ್ಷರೇ, ಪ್ರತಿ ವರ್ಷವೂ ನಿಮ್ಮನ್ನೂ ಸೇರಿ ನಾವೆಲ್ಲರೂ ಸಹಿತ ನಮ್ಮ ಆಸ್ತಿಪಾಸ್ತಿಯ ವಿವರಗಳನ್ನು ಲೋಕಾಯುಕ್ತರಿಗೆ ಕೊಡಬೇಕಾಗುತ್ತದೆ. ಲೋಕಾಯುಕ್ತರಿಗೆ ನನ್ನದು, ನನ್ನ ಹೆಂಡತಿ, ನನ್ನ ಮಕ್ಕಳದ್ದು, ಸಂಬಂಧಿಕರದ್ದು ಆಸ್ತಿಪಾಸ್ತಿ ಎಷ್ಟೆಷ್ಟು ಆಗಿದೆ ಎನ್ನತಕ್ಕದ್ದನ್ನು ಕೊಡುವುದರ ಜೊತೆಗೆ ಈ ದೇಶದಲ್ಲಿ ಇನ್‌ಕಮ್ ಟ್ಯಾಕ್ಸ್ ಡಿಪಾರ್ಟ್‌ಮೆಂಟ್ ಅಂತ ಬೇರೆ ಇದೆ. ಅವರೂ ಕೂಡ ಕೆಲಸ ಮಾಡುತ್ತಾರೆ. ಅವರಿಂದ ನೀವು ಮಾಹಿತಿಗಳನ್ನು ತರಿಸಿಕೊಳ್ಳುವುದಕ್ಕೆ ಆಗಲಿಲ್ಲವೆ? ಇವೆಲ್ಲವೂ ಸಹಿತ ಬರುತ್ತದೆ. ಇದಕ್ಕೆಲ್ಲಾ ಸರಿಯಾದ ಉತ್ತರವನ್ನು ಸರ್ಕಾರ ಕೊಡಲಿ ಅಂತ ಹೇಳಿ ನಮ್ಮ ಪ್ರತಿಭಟನೆಯನ್ನು ನಾವು ಮುಂದುವರೆಸುತ್ತಿದ್ದೇವೆ. ಸರ್ಕಾರದವರು ಇದಕ್ಕೆ ಸಮಂಜಸವಾದ ಉತ್ತರವನ್ನು ಜನರಿಗೆ ಕೊಡಬೇಕೆಂದು ನಾನು ಒತ್ತಾಯ ಮಾಡುತ್ತೇನೆ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್ : ಸನ್ಮಾನ್ಯ ಅಧ್ಯಕ್ಷರೇ, ಈ ಒಂದು ಧರಣಿ ಸತ್ಯಾಗ್ರಹವನ್ನು ಮುಂದುವರೆಸಿ ಎಲ್ಲಾ ಬಿಸಿನೆಸ್ ಅನ್ನು ಅಡಚಣೆ ಅಥವಾ ಸ್ಟಾಲ್ ಮಾಡಬೇಕು ಎನ್ನುವಂತಹ ಉದ್ದೇಶ ನಮಗೇನೂ ಇಲ್ಲ. ಆದರೆ ಸರ್ಕಾರದ ಮುಂದೆ ಇಷ್ಟೆಲ್ಲಾ ಬೇಡಿಕೆಗಳನ್ನು ನಾವು ಇಟ್ಟು ಮತ್ತು ಹಲವಾರು ಕಾಗದಪತ್ರಗಳನ್ನು ಅವರ ಮುಂದಿಟ್ಟು ಇವತ್ತು ಒಂದು ಸರಿಯಾದಂಥ ಕ್ರಮಗಳನ್ನು ಯಾರು ಅಪರಾಧಿಗಳು ಇದ್ದಾರೆ ಅವರ ಮೇಲೆ ಕಾನೂನು ಕ್ರಮವನ್ನು ಕೈಗೊಳ್ಳಬೇಕೆಂದು ನಾವು ಹೇಳುತ್ತಿದ್ದೇವೆ. ಆದರೆ ಸರ್ಕಾರ ಅದಕ್ಕೆ ಸರಿಯಾಗಿ ಸ್ಪಂದನ ಮಾಡುತ್ತಿಲ್ಲ. ಹಾಗೆ ಸ್ಪಂದನ ಮಾಡದೇ ಹೋದರೆ ಈಗಾಗಲೇ ನಾವು ಹೇಳಿದ ಪ್ರಕಾರ ಎರಡು ವರ್ಷದಿಂದ ಸರ್ಕಾರ ಏನೂ ಮಾಡದೇ ಇವೆಲ್ಲವನ್ನೂ ಮುಚ್ಚಿಟ್ಟುಕೊಂಡಿದ್ದಾರೆ ಎಂದು ನಾವು ಹೇಳಬೇಕಾಗುತ್ತದೆ. ಮಾನ್ಯ ಗೃಹ ಸಚಿವರು ತಮ್ಮ ಉತ್ತರವನ್ನು ಕೊಡುವಾಗ ಇದರ ಯಾವುದೇ ಒಂದು ಸ್ಪಷ್ಟತೆಯನ್ನು ಅವರು ತಮ್ಮ ಉತ್ತರದಲ್ಲಿ ಮೂಡಿಸಲಿಲ್ಲ. ಇಲ್ಲಿ ಬಹಳ ಲ್ಯಾಪ್ಸ್‌ಸ್ ಆಗಿವೆ ಎಂದು ನಾವು ಹೇಳುತ್ತಿದ್ದೇವೆ. ಇವತ್ತು ಆತ ಜೈಲಿನಲ್ಲಿದ್ದು ಮೊಬೈಲ್ ಉಪಯೋಗ ಮಾಡುವಂಥಾದ್ದು ಮತ್ತು ಅವರೇ ಇವತ್ತು ಹಾಜರು ಮಾಡಿದಂಥ ಪುಸ್ತಕ ಏನಿದೆ ಅದರಲ್ಲಿ 29ನೇ ಪ್ಯಾರಾದಲ್ಲಿ ಹೇಳುತ್ತಾರೆ–

"ಜೈಲಿನಲ್ಲಿ ಬಂಧಿತನಾಗಿರುವ ಅಬ್ದುಲ್ ಕರೀಂ ಲಾಡ್ ಸಾಬ್ ತೆಲಗಿ ಮತ್ತವನ ಸಹಚರರು ತಮ್ಮ ನಕಲಿ ಛಾಪಾ ಕಾಗದ ವ್ಯವಹಾರವನ್ನು ಇನ್ನೂ ಮುಂದುವರಿಸುತ್ತಿದ್ದಾರೆ........"

ಈ ಸರ್ಕಾರ ಯಾವ ರೀತಿ ಲ್ಯಾಪ್ಸಸ್ ಮಾಡಿದೆ ಎನ್ನುವುದಕ್ಕೆ ಈ ಒಂದು ಸೆಂಟೆನ್ಸ್ ಸಾಕು. ಇದು ಅವರದ್ದೇ ಕಾಗದಪತ್ರಗಳು ಮತ್ತು ಅವರದ್ದೇ ಆದ ಡಾಕ್ಯುಮೆಂಟ್ ಆಧಾರದ ಮೇಲೆ ಇವತ್ತು ಮುಖ್ಯಮಂತ್ರಿಗಳು ಮತ್ತು ಗೃಹಮಂತ್ರಿಗಳು ರಾಜೀನಾಮೆ ಕೊಟ್ಟು ಹೋಗಬೇಕು. ಇದೇ ಕಾಗದಪತ್ರಗಳ ಮೇಲಿಂದಲೇ ಇವತ್ತು ಜೈಲುಖಾತೆ ಮಂತ್ರಿಗಳು ಯಾರಿದ್ದಾರೆ ಅವರು ರಾಜೀನಾಮೆ ಕೊಟ್ಟು ಹೋಗಬೇಕಾಗುತ್ತದೆ. ಆದರೆ ಇದಕ್ಕೆ ವ್ಯತಿರಿಕ್ತವಾಗಿ ಇದು ಯಾವರೀತಿ ನಡೆಯುತ್ತಿದೆ ಎಂದರೆ ಭ್ರಷ್ಟರು ಯಾರಿದ್ದಾರೆ, ಅಂತಹವರಿಗೆ ಪ್ರಮೋಶನ್ ಕೊಡುವಂಥಾದ್ದು ಈ ಸರ್ಕಾರದಲ್ಲಿ

ನಡೆಯುತ್ತಿದೆ. ಇವತ್ತು ಜೈಲು ಖಾತೆಗೆ ಯಾರು ಮಂತ್ರಿಗಳಿದ್ದಾರೆ ಅವರು ರಾಜ್ಯ ಮಂತ್ರಿಗಳಿದ್ದರು. ಆದರೆ ಇಷ್ಟೆಲ್ಲಾ ಲ್ಯಾಪ್ಸಸ್ ಆಗಿದ್ದು ಗೊತ್ತಿದ್ದರೂ ಸಹಿತ ಅವರ ಜವಾಬ್ದಾರಿ ಏನೂ ಇಲ್ಲವೇ? ಈಗ ಅವರನ್ನು ಕ್ಯಾಬಿನೆಟ್ ಮಿನಿಸ್ಟರ್ ಮಾಡಿದ್ದಾರೆ! ಅಂದರೆ ಇವತ್ತು ಈ ಸರ್ಕಾರದಲ್ಲಿ ಏನು ನಡೆಯುತ್ತಿದೆ ಎಂಬುದು ಗೊತ್ತಾಗುತ್ತಿಲ್ಲ. ಯಾರು ಆಡಳಿತ ನಡೆಸುತ್ತಿದ್ದಾರೆ ಅಥವಾ ಗೃಹ ಇಲಾಖೆಗೆ ಮಾಹಿತಿಗಳು ಏನು ಬರುತ್ತಿದೆಯೋ ಇಲ್ಲವೇ ಅಥವಾ ಮುಖ್ಯಮಂತ್ರಿಗಳಿಗೆ ಇಂಟಲಿಜೆನ್ಸ್‌ನಿಂದ ಗುಪ್ತವಾರ್ತೆಗಳು ಏನಾದರೂ ಬರುತ್ತಿದೆಯೇ ಇಲ್ಲವೇ? ಇದು ನಮಗೆ ಅರ್ಥವಾಗುತ್ತಿಲ್ಲ. ಅಥವಾ ಎಲ್ಲಾ ಮಾಹಿತಿಯೂ ಇದೆ, ಆದರೆ ಅವೆಲ್ಲಾ ಬಂದಾಗಲೂ ಕೂಡ ಅವನ್ನು ಮುಚ್ಚಿಟ್ಟಿದ್ದೀರಿ ಎಂದು ಅರ್ಥವಾಗುತ್ತದೆ. ಭ್ರಷ್ಟ ವ್ಯಕ್ತಿಗಳನ್ನು ರಕ್ಷಣೆ ಮಾಡುವುದಕ್ಕಾಗಿ ಈ ಎಲ್ಲಾ ವಿಷಯಗಳನ್ನು ಮುಚ್ಚಿಟ್ಟಿದ್ದೀರಿ ಎಂದಾಗುತ್ತದೆ. ಕೆಲವು ಮಂತ್ರಿಗಳ ಅವ್ಯವಹಾರಗಳು ಗೊತ್ತಿದ್ದಾವೆ, ಅಧಿಕಾರಿಗಳ ಅವ್ಯವಹಾರಗಳು ಗೊತ್ತಿದ್ದಾವೆ. ಆದರೂ ಏನೂ ಮಾಡಿಲ್ಲ. ಈಗ ನಮ್ಮ ಮಾನ್ಯ ಸುರೇಶ್ ಕುಮಾರ್ ಅವರು ಯಾರೋ ಒಬ್ಬ ಬೆಂಗಳೂರು ಮಹಾನಗರಪಾಲಿಕೆಯ ಸದಸ್ಯರ ಬಗ್ಗೆ ಹೇಳುತ್ತಾ ಆತನಿಗೆ ಕರೀಂಲಾಲಾ ಜತೆಗೆ ನಿಕಟ ಸಂಪರ್ಕ ಇದ್ದಿತ್ತು. ಕಳೆದ ಎಂಟು ದಿವಸಗಳ ಹಿಂದೆ ಆತ ನಾಪತ್ತೆಯಾಗಿದ್ದಾನೆ ಅಂತ ಅವರು ಮಾಹಿತಿಯನ್ನು ಕೊಟ್ಟರು. ಹಾಗಾಗಿ ಇದರ ಬಗ್ಗೆ ಸರ್ಕಾರಕ್ಕೆ ಗೊತ್ತಿದೆ ಮತ್ತು ಸ್ಟಾಂಪಿಟ್‌ಗೂ ಗೊತ್ತಿದೆ. ಆದರೂ ಇವತ್ತಿನವರೆಗೂ ಇನ್ವೆಸ್ಟಿಗೇಶನ್ ಮಾಡುವುದಕ್ಕೆ ಈ ಸರ್ಕಾರ ತಯಾರಿಲ್ಲ. ಇನ್ನು ಈ ರೀಚ್ ಫೌಂಡೇಶನ್ ಬಗ್ಗೆ ನಾವು ಹೇಳಿದ್ದೆವು. ಅದರ ಬಗ್ಗೆ ಏನೂ ಇಲ್ಲ. ಆ ಕಾರ್ಪೋರೇಟರ್ ಅದಕ್ಕೆ ಟ್ರೆಜರರ್ ಇದ್ದಾನೆ. ಏನು ಮಾನ್ಯ ರೋಷನ್ ಬೇಗ್ ಅವರು ಅದಕ್ಕೆ ಚೇರ್ಮನ್ ಇದ್ದಾರೆ, ಈಗ ನಾವೇನು ಕಾರ್ಪೋರೇಟರ್‌ನ್ನು ರೆಫರ್ ಮಾಡುತ್ತಿದ್ದೇವೆ, He is a treasurer of that Reach Foundation. ಇಷ್ಟೆಲ್ಲಾ ಮಾಹಿತಿಯನ್ನು ಕೊಟ್ಟಾಗಲೂ ಕೂಡ ನೀವು ಇದರ ಬಗ್ಗೆ ಏನೂ ಇನಿಶಿಯೇಟ್ ತೆಗೆದುಕೊಳ್ಳುವುದಿಲ್ಲ ಎಂದರೆ ನೀವು ಅವರೆಲ್ಲರನ್ನೂ ರಕ್ಷಣೆ ಮಾಡುವುದಕ್ಕೆ ಹೊರಟಿದ್ದೀರಿ ಎನ್ನುವುದು ಇದರ ಮೇಲೆ ಅರ್ಥವಾಗುತ್ತದೆ. ಅದಕ್ಕಾಗಿ ನಾನು ನಿನ್ನೆಯಿಂದಲೂ ಹೇಳುತ್ತಿದ್ದೇನೆ, ಇವತ್ತು ಮಾನ್ಯ ರೋಷನ್ ಬೇಗ್ ಅವರಿಗೆ ಮಕ್ಕಾಗೆ ಹೋಗುವಂತಹ ಅವಶ್ಯಕತೆ ಏನಿದೆ? ಅವರು ಪ್ರತಿವರ್ಷವೂ ಹೋಗುತ್ತಾರೆ. ಆದರೆ ಇವತ್ತೇ ಸದನ ನಡೆಯುತ್ತಿರುವ ಸಂದರ್ಭದಲ್ಲಿಯೇ ಹೋಗುವಂಥಾದ್ದು ಏನಿತ್ತು? ಹಜ್ ಯಾವಾಗ ನಡೆಯುವಂಥಾದ್ದು? ನನಗೆ ಬಂದ ಮಾಹಿತಿ ಪ್ರಕಾರ ಅದು ಮುಂದಿನ ತಿಂಗಳು ನಡೆಯುವಂಥಾದ್ದು. ಅಲ್ಲಿ ಧಾರ್ಮಿಕ ಕಾರ್ಯಕ್ರಮಗಳು ನಡೆಯುವುದು ಮುಂದಿನ ತಿಂಗಳು. ಅವರು ಬೇಕಾದರೆ ಕೊನೆಯ ಹಂತದಲ್ಲಿ ಹೋಗಬಹುದಾಗಿತ್ತು. ಆದರೆ ಇಷ್ಟು ಬೇಗ ಅವರು ಏಕೆ ಹೋದರು?

(ಗೊಂದಲ)

ಶ್ರೀ ಎನ್. ಸಂಪಂಗಿ : ಅಧ್ಯಕ್ಷರೇ, ಪ್ರಶ್ನೋತ್ತರ ಆದ ಮೇಲೆ ಇದನ್ನು ಹೇಳಬಹುದು........

ಶ್ರೀ ವಿ. ಪಾಪಣ್ಣ (ಹುಣಸೂರು) : ಇವರು ಬರದ ಬಗ್ಗೆ ಮಾತನಾಡುತ್ತಿಲ್ಲ, ರೈತರ ಸಮಸ್ಯೆಗಳ ಬಗ್ಗೆ ಮಾತನಾಡುತ್ತಿಲ್ಲ, ಬರೇ ಛಾಪಾ ಛಾಪಾ ಅಂತ ಮಾತನಾಡುತ್ತಿದ್ದಾರೆ....

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್ : ಸನ್ಮಾನ್ಯ ಅಧ್ಯಕ್ಷರೆ, ನಾನು ಹೇಳುವಂಥಾದ್ದು ಏನೆಂದರೆ.....

ಶ್ರೀ ಹೆಚ್.ಸಿ. ಬಸವರಾಜು : ಅಧ್ಯಕ್ಷರೇ, ನಾವೂ ಕೂಡ ಅವರ ತರಹವೇ ಗೆದ್ದುಬಂದಿರತಕ್ಕಂಥ ಶಾಸಕರುಗಳು. ನಾವು ರೈತರ ಬಗ್ಗೆ ಕಾಳಜಿ ಇರತಕ್ಕಂಥವರು. ಬರೇ ಛಾಪಾ

ಕಾಗದ ವಿಚಾರದ ಬಗ್ಗೆ ಚರ್ಚೆ ಮಾಡಿ ಸದನದ ಸಮಯವನ್ನು ಹಾಳುಮಾಡಬೇಡಿ. ಮೊದಲು ಪ್ರಶ್ನೋತ್ತರ ಆಗಲಿ. ಪ್ರಶ್ನೋತ್ತರ ಆದಮೇಲೆ ಬೇಕಾದರೆ ಅವರು ಮಾತನಾಡಲಿ.......

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್ : ಅಧ್ಯಕ್ಷರೇ, ನಾನು ಏನು ಹೇಳುವುದಕ್ಕೆ ಹೊರಟಿದ್ದೇನೆ ಎಂದರೆ.....

(ಗೊಂದಲ)

ಶ್ರೀ ವಿ. ಪಾಪಣ್ಣ : ಇವರಿಗೆ ಬೇರೆ ಸಮಸ್ಯೆಗಳ ಬಗ್ಗೆ ಗಮನವೇ ಇಲ್ಲ. ಬರೀ ಛಾಪಾ ಕಾಗದ, ರೋಷನ್ ಬೇಗ್ ಇಷ್ಟೇ ಆಯಿತು. ಇನ್ನೂ ಪ್ರಶ್ನೋತ್ತರ ಇದೆ, ಅದು ಕೂಡ ಬಹಳ ಮುಖ್ಯವಾದದ್ದು. ಇವರಿಗೆ ರೈತರ ಸಮಸ್ಯೆ ಬೇಡ, ಜನರ ಸಮಸ್ಯೆ ಬೇಡ, ಬೇರೆ ಯಾವುದೂ ಕೂಡ ಬೇಕಾಗಿಲ್ಲ....

ಶ್ರೀ ಜಗದೀಶ್ ಶೆಟ್ಟರ್ : ನಿನ್ನೆ ಪತ್ರಿಕೆಯಲ್ಲಿ ಬಂದಿದೆ. ಮಾನ್ಯ ರೋಷನ್ ಬೇಗ್ ಯಾರ ಜೊತೆಯಲ್ಲಿ ಶಾಮೀಲಾಗಿದ್ದಾರೆ, ಅವರಿಗೆ ಯಾರ್ಯಾರ ಜತೆಯಲ್ಲಿ ಸಂಪರ್ಕ ಇತ್ತು ಎನ್ನುವಂಥಾದ್ದು ಪತ್ರಿಕೆಗಳಲ್ಲಿ ಬಂದಿದೆ. ಯಾರು ದುಷ್ಕರ್ಮಿಗಳು ಇದ್ದಾರೆ, ಯಾರು ರಾಷ್ಟ್ರದ್ರೋಹಿ ಕೆಲಸ ಮಾಡುತ್ತಾರೆ, ಅವರ ಜತೆ ಈ ರೋಷನ್ ಬೇಗ್ ಅಡ್ಡಾಡುತ್ತಿದ್ದಾರೆ, ವಾಸವಾಗಿದ್ದಾರೆ ಎನ್ನುವಂಥಾದ್ದು ನಿನ್ನೆ ಪತ್ರಿಕೆಯ ಮುಖಪುಟದಲ್ಲಿ ಬಂದಿದೆ. ಆದರೂ ಕೂಡ ಏಕೆ ರೋಷನ್ ಬೇಗ್ ಮೇಲೆ ಕ್ರಿಮಿನಲ್ ಕೇಸ್‌ನ್ನು ಹಾಕಿಲ್ಲ? ಏಕೆ ಆತನನ್ನು ಇನ್ನೂ ಬಂಧಿಸುತ್ತಿಲ್ಲ ಎನ್ನುವುದನ್ನು ನಾನು ಇವತ್ತು ಸರ್ಕಾರಕ್ಕೆ ಕೇಳುತ್ತಿದ್ದೇನೆ. ಇದರ ಬಗ್ಗೆ ಸರ್ಕಾರ ಸ್ಪಷ್ಟನೆಯನ್ನು ಮಾಡಬೇಕಾಗುತ್ತದೆ. ಮತ್ತು ಇನ್ನೊಂದು ನಾನು ಹೇಳುತ್ತಿದ್ದೇನೆ. ಇವತ್ತು ಸಾಕಷ್ಟು ರಾಜ್ಯದಲ್ಲಿ ಪ್ರಚಲಿತ ಸಮಸ್ಯೆಗಳು ಇವೆ. ಇವತ್ತು ಬರಗಾಲ ಪರಿಸ್ಥಿತಿ, ಆಮೇಲೆ ಹಳದಿ ಕಾರ್ಡಿನ ಗೊಂದಲ, ಬೆಳೆ ವಿಮೆ ಹಣ ಬಿಡುಗಡೆ ಆಗುತ್ತಿಲ್ಲ, ರೈತರು ಬಂದು ಅಲ್ಲಿ ಬೀದಿಯಲ್ಲಿ ಬಿದ್ದಿದ್ದಾರೆ. ಸರ್ಕಾರಕ್ಕೆ ಇವೆಲ್ಲಾ ಬೇಕಾಗಿಲ್ಲ. ಇವತ್ತು ಸರ್ಕಾರಕ್ಕೆ ನಿಜವಾಗಿಯೂ ಇನ್ನಿತರ ಸಮಸ್ಯೆಗಳ ಬಗ್ಗೆ ಚರ್ಚೆ ಮಾಡುವಂಥಾದ್ದು ಇದ್ದರೆ ಅವರು ತಕ್ಷಣವೇ ಸ್ಪಷ್ಟವಾದಂಥ ಭರವಸೆಯನ್ನು ಕೊಟ್ಟು ಆಜ್ಞೆಯನ್ನು ಮಾಡಲಿ. ವಿದ್ಯುತ್ತಿನ ಸಮಸ್ಯೆ ಇದೆ, ಮತ್ತಿತರ ಸಮಸ್ಯೆಗಳು ಇವೆ. ಹೀಗಾಗಿ ಅವರು ಸ್ಪಷ್ಟನೆಯನ್ನು ಮಾಡುವಂಥಾದ್ದು ಆಗಬೇಕು ಎಂದು ನಾನು ಸರ್ಕಾರವನ್ನು ಒತ್ತಾಯ ಮಾಡುತ್ತಿದ್ದೇನೆ. ತಕ್ಷಣವೇ ಸರ್ಕಾರ ಇದಕ್ಕೆ.....

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್ : ಆದ್ದರಿಂದ ಮುಖ್ಯಮಂತ್ರಿಗಳು ತಕ್ಷಣವೇ ರಾಜೀನಾಮೆಯನ್ನು ಕೊಡಬೇಕು. ಮಾನ್ಯ ರೋಷನ್ ಬೇಗ್ ಮೇಲೆ ಕೇಸ್ ಹಾಕಬೇಕು ಮತ್ತು ಅವರನ್ನು ಬಂಧಿಸಬೇಕು. ಅವರ ಪ್ರಾಪರ್ಟಿಯನ್ನು ಸೀಜ್ ಮಾಡಬೇಕೆಂಬ ಒತ್ತಾಯವನ್ನು ನಾನು ಮಾಡುತ್ತಿದ್ದೇನೆ.

(ಗೊಂದಲ)

ಅಧ್ಯಕ್ಷರು : ಶೆಟ್ಟರ್ ಅವರೇ, ದಯವಿಟ್ಟು ಅವರಿಗೆ ಒಂದು ನಿಮಿಷ ಸುಮ್ಮನೆ ಇರುವುದಕ್ಕೆ ಹೇಳಿ. ನೋಡಿ, ಒಂದು ನಿಮಿಷ ಸುಮ್ಮನಿರಿ. ನಾಯ್ಡುರವರೇ, ದಯವಿಟ್ಟು ಈ ಕಡೆಗೆ ತಿರುಗಿ ನೋಡಿ. ನಿಮ್ಮ ನಾಯಕರು ಈಗಾಗಲೇ ಮಾತನಾಡಿದ್ದಾರೆ.

(ಗೊಂದಲ)

ಶ್ರೀ ಎಸ್.ಎಸ್. ಪಾಟೀಲ್ : ಮಾನ್ಯ ಅಧ್ಯಕ್ಷರೆ, ದಯವಿಟ್ಟು, ಮಾನ್ಯ ಗೃಹ ಸಚಿವರು ಇಲ್ಲೇ ಇದ್ದಾರೆ....

ಶ್ರೀ ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೆ, ಇದರ ಬಗ್ಗೆ ಎರಡು ದಿವಸ ಚರ್ಚೆಯಾದ ಮೇಲೆ ನಿನ್ನೆ ಇದರ ಬಗ್ಗೆ ನಾವು ಸಾಕಷ್ಟು ನಾವು ದೀರ್ಘವಾಗಿ ಉತ್ತರವನ್ನೂ ಕೊಟ್ಟಿದ್ದೇವೆ. ಅವರಿಗೆ ಸಮಾಧಾನವಾಗತಕ್ಕಂಥ ಉತ್ತರವಿಲ್ಲದೇ ಇರಬಹುದು. ಆದರೆ ನಮ್ಮಲ್ಲಿರತಕ್ಕಂಥ ಫ್ಯಾಕ್ಟ್ಸ್ ಏನಿದೆ, ಏನು ಕೆಲಸ ಮಾಡಿದ್ದಾರೆ, ಎಲ್ಲಿಯವರೆಗೆ ನಮ್ಮ ಸ್ವ್ಯಾಂಪಿಟ್ ಬಹಳ ಪ್ರಾಮಾಣಿಕವಾಗಿ, ದಕ್ಷತೆಯಿಂದ ಕೆಲಸ ಮಾಡಿ ಇಡೀ ದೇಶದಲ್ಲೇ ಮೆಚ್ಚುಗೆಯನ್ನು ವ್ಯಕ್ತಪಡಿಸಿಕೊಳ್ಳತಕ್ಕ ರೀತಿಯಲ್ಲಿ ಮಾಡಿದ್ದಾರೆ, ಅದರ ಬಗ್ಗೆ ಸ್ವಲ್ಪ ಕೇಳಿ ಸ್ವಾಮಿ ಎಂದರೆ, ನೀವು ಬಂಧಿಸಿ ಎಂದರೆ ಬಂಧಿಸಲೂ ಆಗುವುದಿಲ್ಲ, ಬಿಡಿ ಎಂದರೆ ಬಿಡಲೂ ಆಗುವುದಿಲ್ಲ, ಕಾನೂನುಗಳು ಇದೆ, ಕೋರ್ಟ್‌ಗಳು ಇದೆ, ಈಗ ಸಿಬಿಐ ಮುಂದೆ ಹೋಗಿದೆ. ಸುಪ್ರಿಂಕೋರ್ಟ್‌ನ ಮುಂದೆಯೂ ಪೆಂಡಿಂಗ್ ಇದೆ. ಇನ್‌ವೆಸ್ಟಿಗೇಷನ್ ಮಾಡತಕ್ಕವರು ಅವರಿಗೆ ಏನು ಸೂಕ್ತವೆಂದು ಅನ್ನಿಸುತ್ತದೋ, ಯಾರು ತಪ್ಪಿತಸ್ತರೋ ಅವರ ಮೇಲೆ ಕಾನೂನಿನ ಕ್ರಮ ಜರುಗಿಸುತ್ತಾರೆ. ನೀವು ಇಂಥವರಿಗೇ ಬಂಧಿಸಿ ಎಂದರೆ, ನಿಮ್ ಇಚ್ಛೆಯ ಪ್ರಕಾರ ಕೋರ್ಟ್‌ಗಳು ನಡೆದುಕೊಳ್ಳಲು ಆಗುವುದಿಲ್ಲ, ನಿಮ್ಮ ಇಚ್ಛೆಯ ಪ್ರಕಾರ ಇನ್‌ವೆಸ್ಟಿಗೇಷನ್ ಟೀಮ್‌ಗಳು ನಡೆದುಕೊಳ್ಳಲು ಆಗುವುದಿಲ್ಲ. ನಿಮ್ಮ ಇಚ್ಛೆಯ ಪ್ರಕಾರ ಬಂಧಿಸಲು ಆಗುವುದಿಲ್ಲ. ನಿಮ್ ಇಚ್ಛೆಯ ಪ್ರಕಾರ ಬಿಡಿ ಎಂದರೆ ಬಿಡಲು ಆಗುವುದಿಲ್ಲ. ಈ ದೇಶದ ಸಂವಿಧಾನವಿದೆ, ಕಾನೂನು ಇದೆ, ಕ್ರಿಮಿನಲ್ ಪ್ರೊಸೀಜರ್ ಕೋಡ್ ಇದೆ, ಐಪಿಸಿ ಇದೆ, ಅದರ ಪ್ರಕಾರ ನಾವೆಲ್ಲರೂ ನಡೆದುಕೊಳ್ಳಬೇಕೇ ಹೊರತು, ನಿಮ್ಮ ದಬ್ಬಾಳಿಕೆಗೆ, ದಬಾವಣೆಗೆ, ಯಾರೋ ವ್ಯಕ್ತಿಗಳ ಚಾರಿತ್ರೆಯನ್ನು ವಧೆ ಮಾಡಲು ನೀವು ಇಲ್ಲಿದ್ದರೆ ಅದನ್ನು ನಾವು ಎಂದೂ ಕೂಡ ಸಹಿಸಲು ಆಗುವುದಿಲ್ಲ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್ : ಎಂಥ ಚಾರಿತ್ರೆಯ ವಧೆ? ಇವರು ಭ್ರಷ್ಟ ಮಂತ್ರಿಗಳಿಗೆ ರಕ್ಷಣೆಯನ್ನು ಕೊಟ್ಟಿದ್ದಾರೆ. ಭ್ರಷ್ಟ ಮಂತ್ರಿಗಳಿಗೆ ರಕ್ಷಣೆಯನ್ನೂ ಕೊಡುವ ಕೆಲಸವನ್ನು ಎರಡು ವರ್ಷಗಳಿಂದ ಮಾಡಿ ಅನ್ಯಾಯ ಮಾಡಿದ್ದಾರೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಅವರು ಹೇಳಿದ್ದನ್ನು ನಾವು ಕೇಳುತ್ತೇವೆ, ಆದರೆ ನಾವು ಹೇಳಿದ್ದನ್ನು ಅವರು ಕೇಳಲು ತಯಾರಿಲ್ಲ.

ಶ್ರೀ ಜಗದೀಶ್ ಶೆಟ್ಟರ್ : ಇವರು ಭ್ರಷ್ಟ ಅಧಿಕಾರಿ, ಭ್ರಷ್ಟ ಮಂತ್ರಿಗಳಿಗೆ ರಕ್ಷಣೆಯನ್ನು ಕೊಡುತ್ತಿದ್ದಾರೆ.

(ಗೊಂದಲ)

ಅಧ್ಯಕ್ಷರು : ನೀವು ಮಾತನಾಡಿದಾಗ ಅವರು ಸುಮ್ಮನೆ ಕೇಳಿದ್ದರಲ್ಲಾ ಆದ್ದರಿಂದ ಅವರು ಹೇಳುವುದನ್ನು ದಯವಿಟ್ಟು ಕೇಳಿ.

ಶ್ರೀ ಜಗದೀಶ್ ಶೆಟ್ಟರ್ : ಅವರು ಸತ್ಯಕ್ಕೆ ದೂರವಾದ ವಿಚಾರವನ್ನು, ಸಂಗತಿಗಳನ್ನು ಹೇಳುತ್ತಿದ್ದಾರೆ.

(ಗೊಂದಲ)

ಶ್ರೀ ಮಲ್ಲಿಕಾರ್ಜುನ ಖರ್ಗೆ : ಮಾಧ್ಯಮಗಳಲ್ಲಿ ಕೆಲವು ಸಲ ಹೆಚ್ಚಿನ ಪ್ರಚಾರ ಸಿಕ್ಕುತ್ತಿದೆಯೆಂದು ಹೇಳಿ ಪದೇ ಪದೇ ಈ ವಾದಗಳನ್ನು ಮಾಡುತ್ತಿರತಕ್ಕದ್ದು.

(ಗೊಂದಲ)

ಶ್ರೀ ಮಲ್ಲಿಕಾರ್ಜುನ ಖರ್ಗೆ : ಪೊಲೀಸರು ಇಲ್ಲವೆ? ಅವರು ಮಾಡುತ್ತಾರೆ ಇನ್‌ವೆಸ್ಟಿಗೇಷನ್.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್ : ಅವರನ್ನು ಮೆಕ್ಕಾಕ್ಕೆ ಏಕೆ ಕಳುಹಿಸಬೇಕಾಗಿತ್ತು?

ಶ್ರೀ ಮಲ್ಲಿಕಾರ್ಜುನ ಖರ್ಗೆ : ಅದನ್ನು ಕೇಳಲು ಇಲ್ಲಿಗೆ ಬಂದಿದ್ದೀರಾ?

ಶ್ರೀ ಜಗದೀಶ್ ಶೆಟ್ಟರ್ : ಅವರು ಇಲ್ಲಿ ಇದ್ದು ವಿಧಾನಸಭೆಯನ್ನು ಫೇಸ್ ಮಾಡಬೇಕಾಗಿತ್ತು. ಹೆದರಿ ಪಲಾಯನ ಮಾಡಿಬಿಟ್ಟಿದ್ದಾರೆ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್ : ಇವರಷ್ಟೇ ಜೋರಾಗಿ ಕೂಗಲು ನಮಗೂ ಬರುತ್ತದೆ. ಜೋರಾಗಿ ಕೂಗಿಬಿಟ್ಟರೆ ಇದು ಮುಗಿದುಹೋಯಿತೇ? ಕಾನೂನು ಏನಿದೆ ಅದರ ಪ್ರಕಾರ ನಡೆದುಕೊಳ್ಳಲು ಅವರಿಗೆ ಆಗುತ್ತಿಲ್ಲ. ಕಾನೂನನ್ನು ಮುರಿದು ಹೋಗುತ್ತಿದ್ದಾರೆ. ಕಾನೂನು ಕಟ್ಟಳೆಗಳೆಲ್ಲಾ ಇದೆ, ಆದರೆ ಆ ಕಾನೂನಿನ ಬತ್ತಳಿಕೆಯನ್ನು ಉಪಯೋಗ ಮಾಡುತ್ತಿಲ್ಲ, ಆ ಕಾನೂನು ಇದ್ದರೂ ಇವರು ಆ ಮಂತ್ರಿಗಳನ್ನು ರಕ್ಷಣೆ ಮಾಡುತ್ತಿದ್ದಾರೆ. ಕಾನೂನಿನ ನೆಪದಲ್ಲಿ ಅವರನ್ನು ರಕ್ಷಣೆ ಮಾಡುತ್ತಿದ್ದಾರೆ.

(ಗೊಂದಲ)

ಶ್ರೀ ಮಲ್ಲಿಕಾರ್ಜುನ ಖರ್ಗೆ : ನಮ್ಮದು ಪ್ರಜಾಪ್ರಭುತ್ವ. ನಮ್ಮಲ್ಲಿ ಮೆಕ್ಕಾಕ್ಕೂ ಹೋಗಬಹುದು. ಮದೀನಾಕ್ಕೂ ಹೋಗಬಹುದು, ಕಾಶಿಗೂ ಹೋಗಬಹುದು. ರಾಮೇಶ್ವರಕ್ಕೂ ಹೋಗಬಹುದು.

ಶ್ರೀ ಬಿ.ಹೆಚ್. ಬನ್ನಿಕೋಡ್ : ವಿರೋಧ ಪಕ್ಷದವರು ಧರಣಿ ಮಾಡುತ್ತಿದ್ದಾರೆ, ಅವರ ನಾಯಕರು ಚರ್ಚೆ ಮಾಡುತ್ತಿದ್ದಾರೆ. ಹೀಗಾದರೆ ಹೇಗೆ? ಧರಣಿ ಮಾಡಲಿ ಇಲ್ಲದಿದ್ದರೆ ಚರ್ಚೆ ಮಾಡಲಿ, ಎರಡನ್ನೂ ಮಾಡಿದರೆ ಹೇಗೆ?

ಶ್ರೀ ಜಗದೀಶ್ ಶೆಟ್ಟರ್ : ಇದರ ನೆಪದಲ್ಲಿ ಅವರು ಭ್ರಷ್ಟ ಮಂತ್ರಿಗಳನ್ನು ರಕ್ಷಣೆ ಮಾಡುತ್ತಿದ್ದಾರೆ.

(ಗೊಂದಲ)

(ಬಿಜೆಪಿ ಸದಸ್ಯರಿಂದ ಬಾವಿಯಲ್ಲಿ ಘೋಷಣೆ)

ಅಧ್ಯಕ್ಷರು : ಮಾನ್ಯ ಶಂಕರಲಿಂಗೇಗೌಡರೆ, ಪೂಜಾರ್‌ರವರೇ, ಏನಿದು? ಜಗದೀಶ್ ಶೆಟ್ಟರ್‌ರವರೆ, ತಾವಾದರೂ ಹೇಳಿ ಅವರಿಗೆ. ನಾನು ಮಾತನಾಡಲು ಎದ್ದು ನಿಂತರೂ ಅವರು ಕೂಗುತ್ತಿದ್ದರೆ ಹೇಗೆ? What is this? ದಯವಿಟ್ಟು ಸುಮ್ಮನೆ ಇರಿ.

(ಬಿಜೆಪಿ ಸದಸ್ಯರು ಬಾವಿಯಲ್ಲಿ ನಿಂತು ಘೋಷಣೆಗಳನ್ನು ಕೂಗುತ್ತಿದ್ದರು)

ಅಧ್ಯಕ್ಷರು : ಶೆಟ್ಟರ್‌ರವರೆ, ಅವರಿಗೆ ಹೇಳಿ. ನಾನು ಒಂದು ನಿಮಿಷ ಮಾತನಾಡುತ್ತೇನೆ. What is this? ಒಂದು ನಿಮಿಷ ಸುಮ್ಮನೆ ಇರಿ. ನಾವು ಇಲ್ಲಿ ಗಲಾಟೆ ಮಾಡಿಕೊಳ್ಳುವುದು ಬೇಡಿ. 12 ಗಂಟೆಯವರೆಗೆ ಸದನವನ್ನು ಮುಂದೂಡುತ್ತೇನೆ. ತಮ್ಮ ಫ್ಲೋರ್ ಲೀಡರ್ಸ್ ಬನ್ನಿ, ನಾಯಕರುಗಳು ಬನ್ನಿ. ನನ್ನ ಕೊಠಡಿಯಲ್ಲಿ ಕುಳಿತು ಮಾತನಾಡೋಣ. ಸಂಧಾನ ಮಾಡಿ ಅನಂತರ ಬರೋಣ. ಈಗ ಸದನವನ್ನು ಮುಂದೂಡಿ ಮತ್ತೆ 12 ಗಂಟೆಗೆ ಸಮಾವೇಶಗೊಳ್ಳುತ್ತದೆ.

(ಸದನವು 11 ಗಂಟೆ 15 ನಿಮಿಷಕ್ಕೆ ಮುಂದೂಡಲ್ಪಟ್ಟು ಮತ್ತೆ 12 ಗಂಟೆಗೆ ಸಮಾವೇಶಗೊಳ್ಳಲು ನಿರ್ಧರಿಸಿತು)

(ಸದನವು ಪುನಃ 12 ಗಂಟೆ 58 ನಿಮಿಷಕ್ಕೆ ಸಮಾವೇಶಗೊಂಡಿತು)

ಮಾನ್ಯ ಅಧ್ಯಕ್ಷರು (ಶ್ರೀ ಎಂ.ವಿ. ವೆಂಕಟಪ್ಪ)ನವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು

ವಿಷಯ : ಛಾಪಾ ಕಾಗದದ ಹಗರಣದ ಬಗ್ಗೆ

ಅಧ್ಯಕ್ಷರು : ನಮ್ಮ ಮುಂದೆ ಬೇಕಾದಷ್ಟು ಕಾರ್ಯಕ್ರಮಗಳು ಇದ್ದಾವೆ. ರಾಜ್ಯಪಾಲರ ಭಾಷಣಕ್ಕೆ constitutional obligation ಇಲ್ಲದೆಯೇ ನಾವು ಪಾಸ್ ಮಾಡಬೇಕು. ಬರಪರಿಹಾರದ ಬಗ್ಗೆ ನೀವುಗಳೇ ಸಪರೇಟ್ ಆಗಿ ಕಳುಹಿಸುತ್ತಿದ್ದೀರಿ. ಜೊತೆಗೆ ಇನ್ನೂ ಕೆಲವು ಸುಗ್ರೀವಾಜ್ಞೆಗಳು ಇದ್ದಾವೆ. ಇವೆಲ್ಲವನ್ನೂ ದಯವಿಟ್ಟು ಪಾಸ್ ಮಾಡಬೇಕು. Question hour ಅಂತೂ ಒಂದು ವಾರದಿಂದ ಆಗಿಯೇ ಇಲ್ಲ. ಶೇಕಡಾ 85 ಭಾಗ ಸದಸ್ಯರುಗಳಿಗೆ ತೊಂದರೆಯಾಗುತ್ತಿದೆ. ಆದ್ದರಿಂದ ತಾವುಗಳು ದಯವಿಟ್ಟು ತಮ್ಮ ತಮ್ಮ ಸೀಟುಗಳಿಗೆ ಹೋಗಬೇಕು.

†ಶ್ರೀ ಜಗದೀಶ್ ಶೆಟ್ಟರ್ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೆ, ನಾನು ಬೆಳಿಗ್ಗೆಯಿಂದ ಒಂದೇ ವಿಷಯವನ್ನು ಇಲ್ಲಿ ಮಂಡನೆ ಮಾಡುತ್ತಿದ್ದೇನೆ. ನಾವು ಯಾವ ಉದ್ದೇಶದಿಂದ ಈ ಧರಣಿ ಸತ್ಯಾಗ್ರಹವನ್ನು ಮಾಡುತ್ತಿದ್ದೇವೆಂದರೆ, ನಕಲಿ ಛಾಪಾ ಕಾಗದದ ಹಗರಣದ ಬಗ್ಗೆ ನಿನ್ನೆ ಸರ್ಕಾರ ಉತ್ತರವನ್ನೇನು ಕೊಟ್ಟಿತು, ನಾವು ಒಂದೇ ಒಂದು ಸ್ಪೆಸಿಫಿಕ್ ಆಗಿ ಕೇಳುತ್ತಿದ್ದೇವೆ, ನಾವು ಮುಖ್ಯಮಂತ್ರಿಗಳ ರಾಜೀನಾಮೆ ಕೇಳಿದೆವು, ಗೃಹ ಸಚಿವರ ರಾಜೀನಾಮೆಯನ್ನು ಕೇಳಿದೆವು, ಅವರು ಕೊಡುವುದಿಲ್ಲವೆಂದು ಮೊಂಡುತನ ಮಾಡುತ್ತಾರೆ, ಮಾಡಲಿ, ಕೊನೆಗೆ ಮಾನ್ಯ ರೋಶನ್ ಬೇಗ್ ಮೇಲೆ ಕ್ರಿಮಿನಲ್ ಕೇಸನ್ನು ಹಾಕಿ ಅವರನ್ನು ಅರೆಸ್ಟ್ ಮಾಡಬೇಕು, ಮತ್ತು ಅವರ ಬ್ಯಾಂಕ್ ಅಕೌಂಟ್ಸ್‌ನ್ನು ಮತ್ತು ಪ್ರಾಪರ್ಟೀಸ್‌ನ್ನು ಸೀಜ್ ಮಾಡಿ ಇನ್‌ವೆಸ್ಟಿಗೇಷನ್‌ನ್ನು ಚಾಲೂ ಮಾಡಿ ಎಂದು ಕೇಳುತ್ತಿದ್ದೇವೆ. ಸರ್ಕಾರ ಇದನ್ನೂ ಸಹ ಮಾಡಲು ತಯಾರಿಲ್ಲ. ಒಬ್ಬ ಆರೋಪಿದು ಪಾಲಿಗ್ರಾಫ್ ಎವಿಡೆನ್ಸ್ ಆಯಿತು, ಆದರೂ ಮುಂದೆ ಅದರ ಬಗ್ಗೆ ಕೋರ್ಟ್‌ಗೆ ಅಪ್ಲಿಕೇಷನ್ ಹಾಕಲು ತಾವು ತಯಾರಿಲ್ಲ. ಅಂದರೆ ಸರ್ಕಾರದ ಕಡೆಯಿಂದ ಏನು ನೆಗ್ಲಿಜೆನ್ಸ್ ಇದೆ ಎಂಬುದನ್ನು ನಾವು ತೋರಿಸಿಕೊಟ್ಟಿದ್ದೇವೆ. ನಾವು ಇವತ್ತು ಕೊನೆಯದಾಗಿ ಒಂದೇ ಒಂದನ್ನು ಡಿಮ್ಯಾಂಡ್ ಮಾಡುತ್ತಿರತಕ್ಕದ್ದು ಏನೆಂದರೆ, ಕೊನೆಯ ಪಕ್ಷ ಮಾನ್ಯ ರೋಶನ್ ಬೇಗ್ ಮೇಲೆ ಕ್ರಿಮಿನಲ್ ಕೇಸನ್ನು initiation ಮಾಡುತ್ತೇವೆಂದು ಸರ್ಕಾರದ ಬಾಯಿಯಿಂದ ಬರಲಿ. ಆನಂತರ ಅವರ ಬ್ಯಾಂಕ್ ಅಕೌಂಟ್‌ನ್ನು ನಾವು ಸೀಜ್ ಮಾಡುತ್ತೇವೆ, ಪ್ರಾಪರ್ಟೀಸ್‌ನ್ನು ಸೀಜ್ ಮಾಡುತ್ತೇವೆ, ಎಂಬ ಬಗ್ಗೆಯಾದರೂ ಸರ್ಕಾರದ ಕಡೆಯಿಂದ ಬರಲಿ, ಹೋಗಲಿ ಇವೆಲ್ಲವೂ ಬೇಡ, ಸರ್ಕಾರಕ್ಕೆ ಮಾಹಿತಿ ಇದ್ದರೆ ಹೇಳಿಬಿಡಲಿ, ರೋಶನ್ ಬೇಗ್‌ರವರಿಗೂ ಕರೀಂಲಾಲರಿಗೂ ಯಾವುದೇ ಸಂಬಂಧವಿಲ್ಲ, ರೋಶನ್‌ಬೇಗ್ ನಿರಪರಾಧಿಯಾಗಿದ್ದಾರೆ ಎಂಬ ಅಂಶ ಗೃಹ ಮಂತ್ರಿಗಳ ಬಾಯಿಂದ ಬಂದುಬಿಡಲಿ. ಅದಾದರೂ ಒಂದು ಸಲ ಆಗಲಿ. ಅದನ್ನಾದರೂ ಮಾಡಿ. ಆದರೆ ನೀವು ಅದಕ್ಕೂ ಕೂಡ ತಯಾರಿಲ್ಲ. ಇಷ್ಟೇ ಬೇಡಿಕೆಗಳನ್ನೇ ನಾವು ನಿಮ್ಮ ಮುಂದೆ ಇಟ್ಟಿದ್ದೆವು. ರಾಜ್ಯದಲ್ಲಿರುವ ಜ್ವಲಂತ ಸಮಸ್ಯೆಗಳ ಬಗ್ಗೆ ಚರ್ಚೆ ಮಾಡಲಿಕ್ಕೆ ನಮಗೂ ಕೂಡ ಮನಸ್ಸಿದೆ. ಇವತ್ತು ಬರಗಾಲದ ಬವಣೆಯಿಂದ ರೈತರು ತೊಂದರೆಗೀಡಾಗಿದ್ದಾರೆ, ಸಂಕಷ್ಟದಲ್ಲಿದ್ದಾರೆ. ಬೆಳೆ ವಿಮೆ ಹಣ ಬಿಡುಗಡೆಯಾಗಿಲ್ಲ. ಬಡವರಿಗೆ ಸರಿಯಾಗಿ ಹಳದಿ ಕಾರ್ಡ್ ವಿತರಣೆಯಾಗಿಲ್ಲ. ರಾಜ್ಯದಲ್ಲಿ ವಿದ್ಯುತ್ತಿನ ಅಭಾವ ಇದೆ. ಇನ್ನೂ ಸಾಕಷ್ಟು ಜ್ವಲಂತ ಸಮಸ್ಯೆಗಳಿವೆ. ನಾವೂ ಚರ್ಚೆ ಮಾಡಬೇಕಾಗಿದೆ, ನಮಗೂ ಮನಸ್ಸಿದೆ. ಆದರೆ ಈ ಸರ್ಕಾರ ಮೊಂಡುತನ ತೋರಿಸುತ್ತಿದೆ. ಸರ್ಕಾರದ ಈ ಮೊಂಡುತನದಿಂದಾಗಿ ಸಾರ್ವಜನಿಕರಲ್ಲಿ ಸಂಶಯಗಳು ಜಾಸ್ತಿಯಾಗುತ್ತಿವೆ. ಭ್ರಷ್ಟ ಮಂತ್ರಿಗಳಿಗೆ

ಹಾಗೂ ಭ್ರಷ್ಟ ಅಧಿಕಾರಿಗಳಿಗೆ ರಕ್ಷಣೆ ಕೊಡುವಂತಹ ಕೆಲಸವನ್ನು ಈ ಸರ್ಕಾರದವರು ಮುಂದುವರೆಸಿದ್ದಾರೆ. ಯಾವೊಬ್ಬ ಭ್ರಷ್ಟ ವ್ಯಕ್ತಿಗಳಿದ್ದಾರೋ, ಅವರ ಮೇಲೆ ಕ್ರಿಮಿನಲ್ ಕೇಸ್ ಹಾಕುವಂತಹ, ಅವರನ್ನು ಅರೆಸ್ಟ್ ಮಾಡಿ, ಅವರ ಪ್ರಾಪರ್ಟಿ ಸೀಜ್ ಮಾಡುವಂತಹ ಕೆಲಸವನ್ನು ಸರ್ಕಾರ ಮಾಡುತ್ತಿಲ್ಲ. ಸರ್ಕಾರ ಅಸಹಾಯಕವಾಗಿ ವರ್ತಿಸುತ್ತಿದೆ ಎನ್ನುವಂತಹ ಸಂಶಯಗಳು ಇವತ್ತು ಮೂಡುತ್ತಿವೆ. ಅದಕ್ಕಾಗಿ ನಾನು ಒತ್ತಾಯ ಮಾಡುತ್ತಿದ್ದೇನೆ, ಈಗ ಏನೊಂದು ಬೇಡಿಕೆಗಳನ್ನು ನಾವು ಸರ್ಕಾರದ ಮುಂದೆ ಇಟ್ಟಿದ್ದೇವೆಯೋ ಅದಕ್ಕೆ ಸರ್ಕಾರ ಸ್ಪಂದಿಸಲಿ. ಮಾನ್ಯ ಗೃಹ ಮಂತ್ರಿಗಳು ಇದಕ್ಕೆ ಸ್ಪಷ್ಟವಾದಂತಹ ಉತ್ತರವನ್ನು ನೀಡಲಿ. ಆಗ ನಾವು ಧರಣಿ ಹಿಂತೆಗೆದುಕೊಳ್ಳುವ ಬಗ್ಗೆ ವಿಚಾರ ಮಾಡುತ್ತೇವೆ.

†**ಶ್ರೀ ಪಿ.ಜಿ.ಆರ್. ಸಿಂಧ್ಯಾ (ಕನಕಪುರ)** : ಮಾನ್ಯ ಅಧ್ಯಕ್ಷರೇ, ಸದನ ನಡೆಯುವಂತಹ ಪರಿಸ್ಥಿತಿಯನ್ನು ನಿರ್ಮಾಣ ಮಾಡಿಕೊಡಲಿಕ್ಕೆ ಸಾಧ್ಯವಾಗುವಂತಹ ಸಹಕಾರವನ್ನು ಸರ್ಕಾರ ಕೊಡಬೇಕೆಂದು ನಾನು ಒತ್ತಾಯ ಮಾಡುತ್ತಿದ್ದೇನೆ. ವಿರೋಧ ಪಕ್ಷದವರಾದ ನಾವು ಧರಣಿ ಮಾಡದಿರಬಹುದು. ಆದರೆ ನಾವು ಪ್ರತಿಭಟನೆ ಮಾಡಿದ್ದೇವೆ. ಈ ಪ್ರತಿಭಟನೆಯ ಹಿಂದೆ ಕೆಲವು ಬೇಡಿಕೆಗಳಿವೆ. ಬಹಳ ಜನ ತತ್ತರಿಸುವಂತೆ ಮಾಡಿರುವ ಬರಗಾಲದ ಬಗ್ಗೆ, ವಿದ್ಯುಚ್ಛಕ್ತಿಯ ಬಗ್ಗೆ, ಹಳದಿ ಕಾರ್ಡ್ ವಿತರಣೆಯಲ್ಲಿನ ದುರವ್ಯಸ್ಥೆ ಬಗ್ಗೆ ನಾವು ಇವತ್ತು ಚರ್ಚೆ ಮಾಡಬೇಕಾಗಿದೆ. ಆದ್ದರಿಂದ ನಾನು ಸರ್ಕಾರವನ್ನು ಕೇಳಿಕೊಳ್ಳತಕ್ಕಂಥದ್ದು ಏನೆಂದರೆ, ಮಾನ್ಯ ರೋಷನ್ ಬೇಗ್‌ರವರು ರಾಜೀನಾಮೆ ಕೊಡಲಿಕ್ಕೆ ಮುಂಚೆ ಇದ್ದಂತಹ ಪರಿಸ್ಥಿತಿಗೂ, ರಾಜೀನಾಮೆ ಕೊಡತಕ್ಕಂಥ ಪರಿಸ್ಥಿತಿಗೂ ಇರತಕ್ಕಂಥ ವ್ಯತ್ಯಾಸವೇನು? ಎರಡನೆಯದಾಗಿ, ಸರ್ಕಾರದವರು ನಾವು ಸಿ.ಬಿ.ಐ.ಗೆ ಕೊಡುವುದಿಲ್ಲ ಎಂದು ಪದೇ ಪದೇ ಹೇಳುತ್ತಿದ್ದಿರಿ. ಆದರೆ ಈಗ ಸಿ.ಬಿ.ಐ.ಗೆ ಪ್ರಕರಣವನ್ನು ವಹಿಸುತ್ತಿದ್ದೀರಲ್ಲಾ? ಇಂತಹ ಪರಿಸ್ಥಿತಿಗೆ ಬರಲು ಆಗಿರತಕ್ಕಂಥ ಬದಲಾವಣೆ ಏನು? ನಾನೂ ಸೇರಿದಂತೆ ಇಲ್ಲಿರತಕ್ಕಂಥವರು ಅನೇಕರು ಕ್ಯಾಬಿನೆಟ್ ಸಚಿವರಾಗಿ ಕೆಲಸ ಮಾಡಿರತಕ್ಕಂಥವರಾಗಿದ್ದೇವೆ. ಸಚಿವ ಸಂಪುಟದ ಒಬ್ಬ ಸದಸ್ಯ ವಿದೇಶಕ್ಕೆ ಹೋಗಬೇಕಾದರೆ, ಮಾನ್ಯ ಮುಖ್ಯಮಂತ್ರಿಗಳ ಅನುಮತಿ ಪಡೆದುಕೊಳ್ಳದೇ ಹೋಗಲಿಕ್ಕೆ ಸಾಧ್ಯವಿಲ್ಲ. ಮಾನ್ಯ ರೋಷನ್ ಬೇಗ್‌ರವರು ವಿದೇಶಕ್ಕೆ ಹೇಗೆ ಹೋದರು? ಸರ್ಕಾರದವರು ಅವರಿಗೆ ಪರ್ಮಿಷನ್ ಅನ್ನು ಕೊಟ್ಟರೆ? ಹಜ್ ಕ್ಯಾಂಪ್‌ನಿಂದ ಅವರು ಹಾರಿ ಹೋಗಿ ಬಿಟ್ಟರು ಎಂದು ನೀವು ಹೇಳುತ್ತಿದ್ದೀರಿ. ಹಜ್ ಕ್ಯಾಂಪ್‌ನಿಂದ ಅವರು ಹೋಗಬೇಕಾದರೂ ಕೂಡ ಅದಕ್ಕೆ ವೀಸಾ ಬೇಕಾಗುತ್ತದೆ. ಈ ರೀತಿಯಾಗಿ ಇವರ ಮೇಲೆ ಆಪಾದನೆ ಇದೆ ಎಂದು ನೀವ್ಯಾಕ್ಕೆ ಕೇಂದ್ರ ಸರ್ಕಾರಕ್ಕೆ ತಿಳಿಸಿರಲಿಲ್ಲ? ಅವರು ಹಾಗೆಯೇ ಹಾರಿ ಹೋಗುವುದಕ್ಕೆ ಸಾಧ್ಯವಿದೆಯೇ? ಮಾನ್ಯ ರೋಷನ್ ಬೇಗ್‌ರವರು ತಪ್ಪಿತಸ್ಥರಲ್ಲದೇ ಹೋಗಿದ್ದರೆ ರಾಜಾರೋಷವಾಗಿ ಈ ಸದನದಲ್ಲಿ ಬಂದು, ನನ್ನ ಮೇಲೆ ಆಪಾದನೆ ಇದೆ, ಆದರೆ ನಾನು ಆ ಆಪಾದನೆಯಿಂದ ದೂರ ಇದ್ದೇನೆ ಅನ್ನತಕ್ಕಂಥ ಒಂದು ಹೇಳಿಕೆಯನ್ನು ಮಾಡಬಹುದಾಗಿತ್ತು. ಅದನ್ನೂ ಮಾಡಲಿಲ್ಲ. ಇದು ಎರಡನೆ ಬೇಡಿಕೆ. ನೀವು details of the enquiry ಅನ್ನು ಹೇಳಿದ್ದೀರಿ. ಅದನ್ನು ನೀವು ಸ್ವಲ್ಪ ಮಾತ್ರ ಹೇಳಿದ್ದೀರಿ. ಹಗರಣದಲ್ಲಿ ಮಾಜಿ ಗೃಹ ಸಚಿವರಿದ್ದಾರೆ ಎಂಬ ಮಾತು ಕೇಳಿ ಬಂತು, ಯಾರು ಅವರು? ಹಾಲಿ ಮಂತ್ರಿಗಳೂ ಇದ್ದಾರಂತೆ, ಯಾರು ಅವರು? ಇದು ಜನಗಳಿಗೆ ಗೊತ್ತಾಗಬೇಕಲ್ಲವೇ? ಅಧಿಕಾರಿಗಳೂ ಸಹ ಇದ್ದಾರೆ. ಅವರ್ಯಾರು ಎಂಬುದು ಜನಗಳಿಗೆ ಗೊತ್ತಾಗಬೇಕೆಲ್ಲವೇ? ನಾನು Home Minister ಆಗಿದ್ದರೆ, ಒಂದು ಎನ್‌ಕ್ವೈರಿ ಬಗ್ಗೆ ಇರುವಂತಹ ಎಲ್ಲಾ ಡೀಟೈಲ್ಸ್ ಅನ್ನೂ ಸಹ ಕೊಡಿ ಎಂದು

ಹೇಳಿದ್ದರೆ, ನಾನು ಕೊಡುತ್ತಿರಲಿಲ್ಲ. ನಿಮಗೆ ಅನುಕೂಲ ಆಗತಕ್ಕಂಥದ್ದನ್ನು ಕೊಟ್ಟು, ಅನಾನುಕೂಲ ಆಗತಕ್ಕಂಥದ್ದನ್ನು ಬಿಟ್ಟಿದ್ದೀರಿ ಎನ್ನತಕ್ಕಂಥದ್ದು ನಮ್ಮ ವಾದ. ಯಾವ ಅಧಿಕಾರಿಗಳ ಮೇಲೆ, ಯಾವ ಮಾಜಿ ಮಂತ್ರಿಗಳ ಮೇಲೆ, ಯಾವ ಹಾಲಿ ಮಂತ್ರಿಗಳ ಮೇಲೆ ಆಪಾದನೆ ಇದೆ ಎನ್ನತಕ್ಕಂಥದ್ದನ್ನು ರಾಜ್ಯದ ಜನತೆಗೆ ತಿಳಿಸಬೇಕು ಎನ್ನುವ ಒತ್ತಾಯ ಮಾಡಲಿಕ್ಕೋಸ್ಕರ ನಾವು ಇಲ್ಲಿ ಹೋರಾಟ ಮಾಡುತ್ತಿದ್ದೇವೆಯೇ ಹೊರತು ಬೇರೆ ಇನ್ನೇನೂ ಇಲ್ಲ. ಮಾನ್ಯ ಸೋಮಶೇಖರ್‌ರವರು ರೆವಿನ್ಯೂ ಮಿನಿಸ್ಟರ್ ಆಗಿದ್ದಾಗ ಕೆಲವೊಂದು ಕ್ರಮಗಳನ್ನು ತೆಗೆದುಕೊಂಡಿದ್ದರು. ಆ ಕ್ರಮಗಳನ್ನು ನೀವ್ಯಾಕೆ ಮುಂದುವರೆಸಲಿಲ್ಲ? ಅವರ ಆಪಾದನೆ ಹಿಂದಿರುವಂತಹ ಅರ್ಥ ಏನೆಂದರೆ, ಈ ರೀತಿ ನೀವು ಸೈಲೆಂಟ್ ಆಗಬೇಕಾದರೆ, ನಾವು ಮಾಡಿರತಕ್ಕಂಥ ಕಾನೂನುಗಳನ್ನು ಕಾರ್ಯಾಚರಣೆಗೊಳಿಸದೇ ಇರಬೇಕಾದರೆ, ಛಾಪಾ ಕಾಗದ ಹರಗಣ ನಡೆಯಲಿ ಎನ್ನುವುದೇ ಸರ್ಕಾರದ ವಿಚಾರವಾಗಿರಬಹುದು ಎನ್ನತಕ್ಕಂಥದ್ದು ಅವರ ಆಪಾದನೆಯಾಗಿದೆ. ಅದರ ಬಗ್ಗೆ ಸ್ಪಷ್ಟವಾಗಿ ಇಷ್ಟು ನಷ್ಟವಾಗಿದೆ? ಇಷ್ಟು ನಷ್ಟವಾಗಿಲ್ಲ ಎಂದು ಹೇಳುವುದಕ್ಕೆ ಸರ್ಕಾರಕ್ಕೆ ಇರತಕ್ಕಂಥ ತೊಂದರೆಯಾದರೂ ಏನು? ಇದನ್ನು ನಾವು ಕೇಳುತ್ತಿದ್ದೇವೆಯೇ ವಿನಃ, ಈ ಸದನ ನಡೆಸಬಾರದು ಅನ್ನತಕ್ಕಂಥ ಉದ್ದೇಶ ನಮಗ್ಯಾರಿಗೂ ಸಹ ಇಲ್ಲ. ಸದನ ನಡೆಯಬೇಕು ಎನ್ನುವಂತಹ ಉದ್ದೇಶವನ್ನೇ ನಾವೆಲ್ಲರೂ ಸಹ ಇಟ್ಟುಕೊಂಡಿದ್ದೇವೆ. ರಾಜ್ಯದ ಜನತೆ ನಾಳೆ ಚುನಾವಣೆ ಬರುತ್ತದೆ ಎನ್ನುವ ಉದ್ದೇಶದಿಂದ ಸರ್ಕಾರದ ಮೇಲೆ ಗೂಬೆ ಕೂರಿಸುವ ಸಲುವಾಗಿ ಇದೊಂದೇ ವಿಚಾರವನ್ನೇ ವಿರೋಧ ಪಕ್ಷದವರು ಹಿಡಿದುಕೊಂಡು ಕುಳಿತಿದ್ದಾರೆ ಎಂದು ತಿಳಿದುಕೊಳ್ಳುವಂತಾದ್ದು ಆಗಬಾರದು. ಮೂರು ದಿನಗಳ ಕಾಲ ಪ್ರಶ್ನೆಗಳಾವುವನ್ನೂ ಚರ್ಚೆಗೆ ತೆಗೆದುಕೊಂಡಿಲ್ಲ. ಮಾನ್ಯ ಸದಸ್ಯರ ಕ್ಷೇತ್ರಗಳಿಗೆ ಸಂಬಂಧಪಟ್ಟಂತೆ ಅನೇಕ ಪ್ರಶ್ನೆಗಳಿವೆ. ಆದರೆ ಆ ಪ್ರಶ್ನೆಗಳ ಚರ್ಚೆಗೆ ಅವಕಾಶವೇ ಆಗಲಿಲ್ಲ. ಇದಕ್ಕೆ ಸರ್ಕಾರವೇ ಕಾರಣ! ಸರ್ಕಾರದವರಿಗೆ ನಾನು ಇವತ್ತೂ ಸಹ ವಿನಂತಿ ಮಾಡಿಕೊಳ್ಳುತ್ತಿದ್ದೇನೆ, ಇವತ್ತು ಏನೆಲ್ಲಾ ಸಂಶಯಗಳಿವೆಯೋ, ಈ ಸಂಶಯಗಳಿಗೆ ನೀವು ಉತ್ತರ ಕೊಡಿ. ಇದಕ್ಕೆ ಹೀಗೆಯೇ ಉತ್ತರ ಕೊಡಬೇಕೆಂದು ನಾವು ಹೇಳುವುದಿಲ್ಲ. ನೀವು ಹೀಗೆಯೇ ಉತ್ತರ ಕೊಡಬೇಕೆಂದು ನಾವು ಹೇಳುವುದಕ್ಕಾಗುವುದಿಲ್ಲ. ನೀವು ಉತ್ತರವನ್ನೇ ಕೊಡದೇ ಬಾಕಿಯದನ್ನೆಲ್ಲವನ್ನೂ ಹೇಳಿಕೊಂಡು ಬಂದಿದ್ದೀರಿ. ನೀವು ಕೇಂದ್ರ ಸರ್ಕಾರಕ್ಕೆ ಬರೆದಿರತಕ್ಕಂಥ ಪತ್ರ, ಕೇಂದ್ರ ಸರ್ಕಾರದವರು ನಿಮಗೆ ಕೊಟ್ಟಿರತಕ್ಕಂಥ ಶಾಭಾಷ್‌ಗಿರಿ ಇದರ ಬಗ್ಗೆ ನೀವು ಹೇಳಿಕೊಂಡು ಕುಳಿತುಕೊಂಡರೆ, ನೀವೇನೂ ಪುರುಷಾರ್ಥ ಸಾಧನೆ ಮಾಡಿದಂತಾಗುವುದಿಲ್ಲ. ಇದರಿಂದ ನಮ್ಮ ಸಂಶಯ, ಅಂದರೆ ರಾಜ್ಯದ ಜನತೆಯ ಸಂಶಯಗಳು ಇದರಿಂದ ನಿವಾರಣೆಯಾಗುವುದಿಲ್ಲ. ಅದಕ್ಕೆ ಸ್ಪಷ್ಟನೆಯನ್ನು ಕೊಡಬೇಕೆಂದು ನಾನು ಸರ್ಕಾರದವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಎಸ್.ಎಸ್. ಪಾಟೀಲ್ (ಮುಂಡರಗಿ) : ಮಾನ್ಯ ಅಧ್ಯಕ್ಷರೇ, ತಾವು ತಮ್ಮ ಛೇಂಬರ್‌ನಲ್ಲಿ ಎರಡೂ ಕಡೆಯವರನ್ನು ಕರೆದು ಮಾತನಾಡಿದ್ದೀರಿ. ಅಲ್ಲಿ ಏನಾಯಿತು ಎಂಬುದು ಈ ಸದನಕ್ಕೆ ತಿಳಿಯಬೇಕು. ತಾವು ಅಲ್ಲಿ ಏನೇನು ಚರ್ಚೆ ಮಾಡಿದಿರಿ? ನೀವು ಅವರಿಗೆ ಏನು ಹೇಳಿದಿರಿ? ಇವರದ್ದು ತಪ್ಪೋ, ಅವರದ್ದು ತಪ್ಪೊ ಎಂಬುದು ಸದನಕ್ಕೆ ತಿಳಿಯಬೇಕಾಗುತ್ತದೆ. ತಮ್ಮ ಮಾತನ್ನು ಕೇಳದಿರುವ ತಪ್ಪನ್ನು ಯಾರು ಮಾಡಿದರು ಎಂಬುದು ಸದನಕ್ಕೆ ಗೊತ್ತಾಗಬೇಕಲ್ಲವೇ? ಅವರಿಬ್ಬರಲ್ಲಿ ಯಾರು ಏನನ್ನು ಕೇಳಿದರು? ಅದರಲ್ಲಿ ಯಾರದ್ದು ತಪ್ಪು? ಯಾರದ್ದು ಸರಿ ಎಂಬುದು ನಮಗೆ ಗೊತ್ತಾಗಬೇಕಲ್ಲವೇ? ಅಲ್ಲಿ ಏನು ನಡೆಯಿತು ಎಂಬುದನ್ನು ತಾವು ಸದನಕ್ಕೆ ತಿಳಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು : ಅಲ್ಲಿ ನಡೆದದ್ದು ಇಷ್ಟೇ. ಅಲ್ಲಿ ನಡೆದದ್ದೆಲ್ಲವನ್ನೂ ಕೂಡ ಹೇಳುವುದಕ್ಕಾಗುವುದಿಲ್ಲ. ಅವರ ವಾದ ಅವರು ಮಾಡಿದರು, ಇವರ ವಾದ ಇವರು ಮಾಡಿದರು. ಒಟ್ಟಾರೆಯಾಗಿ ಏನೂ ತೀರ್ಮಾನವಾಗಲಿಲ್ಲ. ಮಾನ್ಯ ಮಂತ್ರಿಗಳು ಏನು ಹೇಳುತ್ತಾರೆ ಎಂಬುದನ್ನು ಈಗ ಕೇಳೋಣ ಇರಿ.

ಶ್ರೀ ಎಸ್.ಎಸ್. ಪಾಟೀಲ್ : ಅಲ್ಲಿ ಏನಾಯಿತು ಎಂಬುದನ್ನು ಹೇಳಬೇಕಲ್ಲವೇ?

ಅಧ್ಯಕ್ಷರು : ಅಲ್ಲಿ ಏನು ನಡೆಯಿತು ಎಂಬುದನ್ನು ಹೇಳಿದೆನಲ್ಲಾ, ಒಟ್ಟಾರೆ ಸಾರಾಂಶವನ್ನು ಹೇಳಿದ್ದೇನೆ. ಅಲ್ಲಿ ಏನೊಂದೂ ತೀರ್ಮಾನವಾಗಲಿಲ್ಲ ಎಂದು ನಾನು ಹೇಳುತ್ತಿದ್ದೇನಲ್ಲಾ? ಅಲ್ಲಿ ಒಳಗಡೆ ಏನೂ ತೀರ್ಮಾನವಾಗಲಿಲ್ಲ.

ಶ್ರೀ ಬಿ. ಸೋಮಶೇಖರ್ : ಮಾನ್ಯ ಅಧ್ಯಕ್ಷರೇ, ಇಲ್ಲಿ ಈ ಸದನವನ್ನು........

ಅಧ್ಯಕ್ಷರು : ಮಾನ್ಯ ಚಂದ್ರೇಗೌಡರಿಗೆ ಉತ್ತರ ಕೊಡಲು ಅವಕಾಶ ಕೊಡಿ.

ಶ್ರೀ ಡಿ. ಬಿ. ಚಂದ್ರೇಗೌಡ : ಮಾನ್ಯ ಅಧ್ಯಕ್ಷರೇ, ಅವರು ಹೇಳಿದ್ದನ್ನು ನಾವು ಕೇಳಿದ್ದೇವೆ, ಈಗ ನಮಗೂ ಹೇಳಲಿಕ್ಕೆ ಅವಕಾಶ ಕೊಡಬೇಡವೇ?

ಶ್ರೀ ಬಿ. ಸೋಮಶೇಖರ್ : ಮಾನ್ಯ ಅಧ್ಯಕ್ಷರೇ, ತಮ್ಮ ಕೊಠಡಿಯೊಳಗೆ ನಾವೊಂದು ಸೂಚನೆಯನ್ನು ಕೊಟ್ಟೆವು. ಅದೇನೆಂದರೆ, ಬಿ.ಜೆ.ಪಿ. ಸದಸ್ಯರುಗಳು ಈ ಒಂದು ಧರಣಿಯನ್ನು ಹಿಂತೆಗೆದುಕೊಳ್ಳಬೇಕೆಂದು ನಾವು ಕೇಳಿಕೊಳ್ಳುತ್ತೇವೆ. ಸರ್ಕಾರದವರು ನಾವು ಏನೊಂದು ಪ್ರಮುಖವಾದಂತಹ ವಿಚಾರಗಳನ್ನೇನು ಇಲ್ಲಿ ಪ್ರಸ್ತಾಪ ಮಾಡಿದ್ದೇವೆಯೋ ಅದಕ್ಕೆ ಯಾವುದೇ ರೀತಿಯ ಉತ್ತರವನ್ನು ಕೊಟ್ಟಿಲ್ಲ. ಈ ಸದನ ಪ್ರಾರಂಭವಾದಾಗ ನಾವು ಯಾವ ವಿಚಾರಕ್ಕೋಸ್ಕರ adjournment motion ಸೂಚನೆಯನ್ನು ಕೊಟ್ಟೆವು? ಯಾವ ವಿಚಾರಕ್ಕೋಸ್ಕರ ಅದರ ಮೇಲಿನ ಚರ್ಚೆಯನ್ನು ನಿಯಮ 69ಕ್ಕೆ convert ಮಾಡಿದಿರಿ? ಯಾವ ವಿಚಾರ ಇವತ್ತು proceedings ನಲ್ಲಿ domination ಆಯಿತು? ಆ ಯಾವುದೇ ವಿಚಾರಕ್ಕೂ ಕೂಡ ತಮ್ಮಿಂದ ನಮಗೆ ಉತ್ತರ ಬರಲಿಲ್ಲ. ಬೆಳಿಗ್ಗೆ ಹೇಳಿದಂತೆ ನೀವು ಯಾವುದಾದರೂ ಉತ್ತರ ಕೊಡಿ, ಚಿಂತೆ ಇಲ್ಲ. ನೀವು ಹೀಗೆಯೇ ಉತ್ತರ ಕೊಡಬೇಕು, ಹಾಗೆಯೇ ಉತ್ತರ ಕೊಡಬೇಕು ಎಂದು ನಾವು ಹೇಳುವುದಕ್ಕಾಗುವುದಿಲ್ಲ. ಸರ್ಕಾರ ತನಗೆ ಇಚ್ಚಿಸಿದ ರೀತಿಯಲ್ಲಿ ಉತ್ತರ ಕೊಡಬಹುದು. ಆದರೆ ಇಲ್ಲಿ ಏನಾಗಿದೆ ಎಂದರೆ, ನಾವು ಇಲ್ಲಿ ಪ್ರಸ್ತಾಪಿಸಿದ ವಿಚಾರಗಳಿಗೂ, ಸರ್ಕಾರ ಕೊಟ್ಟಿರತಕ್ಕಂಥ ಉತ್ತರಗಳಿಗೂ ಯಾವುದೇ ರೀತಿಯಾದಂತಹ ಸಂಬಂಧ ಇಲ್ಲ. ನೀವು ಅದಕ್ಕೆ ಉತ್ತರವನ್ನು ಕೊಟ್ಟರೆ, ನಾವು ಬಿ.ಜೆ.ಪಿ. ಸದಸ್ಯರನ್ನು ತಾವು ಧರಣಿ ಹಿಂತೆಗೆದುಕೊಂಡು, ಸದನ ನಡೆಸಲಿಕ್ಕೆ ಅವಕಾಶ ಮಾಡಿಕೊಡಿ ಎಂದು ಕೇಳಿಕೊಳ್ಳುತ್ತೇವೆ ಎಂಬ ಮಾತನ್ನು ನಾನು ಹೇಳಿದೆ. ಅದನ್ನು ತಾವು ಒಪ್ಪಿಕೊಳ್ಳಲಿಲ್ಲ. ಇವರು ಒಂದು ಕಡೆ ಧರಣಿ ನಡೆಸುತ್ತಿದ್ದಾರೆ. ಸರ್ಕಾರ ಒಂದು ಕಡೆ ನಿರಾಸಕ್ತಿಯಿಂದ ಇದೆ. ಏಕೆಂದರೆ ಸರ್ಕಾರಕ್ಕೆ ಬೇಕಾಗಿರುವುದೂ ಕೂಡ ಅದೇ. ಇವತ್ತು ಸರ್ಕಾರಕ್ಕೆ ಬೇರೆ ಕೆಲಸಗಳು ಆಗಬೇಕಾದಂತಹ ಅವಶ್ಯಕತೆ ಇಲ್ಲ. ಇದೇ ರೀತಿ ಮುಂದುವರೆದುಕೊಂಡು ಹೋಗಲಿ. ಇದರಿಂದ ನಾವು embrassment ನಿಂದ ತಪ್ಪಿಸಿಕೊಳ್ಳಬಹುದು ಎನ್ನುವ ಉದ್ದೇಶ ಸರ್ಕಾರಕ್ಕಿದೆ ಎಂದು ಕಾಣುತ್ತದೆ. ಸರ್ಕಾರದವರು ಏನಾದರೂ ಒಂದು ಉತ್ತರವನ್ನು ಕೊಟ್ಟರೆ ನಾವು ಬಿ.ಜೆ.ಪಿ.ಯವರಿಗೆ ಧರಣಿ ಹಿಂತೆಗೆದುಕೊಳ್ಳುವಂತೆ ಮನವಿ ಮಾಡಿಕೊಳ್ಳುತ್ತೇವೆ. ಮಾನ್ಯ ಖರ್ಗೆಯವರು 11ನೇ ತಾರೀಖಿನವರೆಗೂ ಇವರಿಗೆ ಮುಂದುವರೆಸುವ ಉದ್ದೇಶ ಇದೆ ಎಂದು ಹೇಳುತ್ತಿದ್ದಾರೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ನಾನು ಆ ಮಾತನ್ನು ಎಲ್ಲಿ ಹೇಳಿದೆ?

ಶ್ರೀ ಬಿ. ಸೋಮಶೇಖರ್ : ತಾವು ಒಳಗಡೆ ಈ ಮಾತನ್ನು ಹೇಳಿದಿರಲ್ಲಾ?

ಶ್ರೀ ಮಲ್ಲಿಕಾರ್ಜುನ ಖರ್ಗೆ : "ಕದ್ದು ಹೋಳಿಗೆ ಕೊಟ್ಟರೂ ಒಯ್ದುಕೊಂಡು ಹೋಗಿ ತಿಂದರಂತೆ" ನಾನು ಅಲ್ಲಿ ಹೇಳಿದ್ದೆಂದು ಹೇಳಿ, ಅದನ್ನು ಇಲ್ಲಿ ಪ್ರಸ್ತಾಪ ಮಾಡುತ್ತಿದ್ದೀರಾ? ಕೊಠಡಿಯೊಳಗೆ ನಾನು ಹೇಳಿದ್ದು ಮತ್ತು ಅವರು ಹೇಳಿದ್ದನ್ನು ಇಲ್ಲಿ ಹೇಳುವುದಕ್ಕಾಗುತ್ತದೆಯೇ?

ಅಧ್ಯಕ್ಷರು : ಎಲ್ಲವನ್ನೂ ಹೇಳುವುದಕ್ಕಾಗುವುದಿಲ್ಲ. ನಾನು ಆಗಲೇ ಅಲ್ಲಿ ಏನೂ ತೀರ್ಮಾನವಾಗಲಿಲ್ಲ ಎಂದು ಒಟ್ಟಾರೆಯಾಗಿ ಸಾರಾಂಶವನ್ನು ಹೇಳಿದ್ದೇನೆ.

ಶ್ರೀ ಕೆ. ಶ್ರೀನಿವಾಸಗೌಡ ಕುಡುವನಹಳ್ಳಿ : ಮಾನ್ಯ ಅಧ್ಯಕ್ಷರೇ, ನಾನು ಒಂದು ನಿಮಿಷ ಮಾತನಾಡಿ ಬಿಡುತ್ತೇನೆ.

ಶ್ರೀ ಡಿ. ಬಿ. ಚಂದ್ರೇಗೌಡ : ಮಾನ್ಯ ಅಧ್ಯಕ್ಷರೇ, ಇದು ಚರ್ಚೆಯಲ್ಲ. ಸದನವನ್ನು ನಡೆಸಬೇಕೋ ಬೇಡವೋ?

ಅಧ್ಯಕ್ಷರು : ಮಾನ್ಯ ಶ್ರೀನಿವಾಸಗೌಡರೇ, ತಮ್ಮ ನಾಯಕರು ಮಾತನಾಡುವಾಗ ಅವರು ಸುಮ್ಮನೆ ಕುಳಿತಿರಲಿಲ್ಲವೇ?

ಶ್ರೀ ಕೆ. ಶ್ರೀನಿವಾಸಗೌಡ ಕುಡುವನಹಳ್ಳಿ : ನಾನೂ ಒಂದು ನಿಮಿಷ ಮಾತನಾಡುತ್ತೇನೆ. ದಯವಿಟ್ಟು ಅವಕಾಶ ಮಾಡಿಕೊಡಿ.

ಅಧ್ಯಕ್ಷರು : ಮಾನ್ಯ ಮಂತ್ರಿಗಳು ಏನು ಹೇಳುತ್ತಾರೆ ಎಂಬುದನ್ನು ಕೇಳೋಣ ಇರಿ.

ಶ್ರೀ ಡಿ. ಬಿ. ಚಂದ್ರೇಗೌಡ : ಅವರು ಮಾತನಾಡಿದ ನಂತರ ಆಚೆ ಹೋಗಿ ಬಿಡುತ್ತಾರೆ.

ಶ್ರೀ ಕೆ. ಶ್ರೀನಿವಾಸಗೌಡ ಕುಡುವನಹಳ್ಳಿ : ಮಾನ್ಯ ಮಂತ್ರಿಗಳು ಉತ್ತರ ಕೊಟ್ಟರೆ ಇವರು ಸ್ಲೋಗನ್‌ಗಳನ್ನು ಕೂಗುತ್ತಾರೆ.

ಅಧ್ಯಕ್ಷರು : ಮಾನ್ಯ ಶ್ರೀನಿವಾಸಗೌಡರೇ, ಮಾನ್ಯ ಮಂತ್ರಿಗಳು ಏನು ಹೇಳುತ್ತಾರೋ ಕೇಳೋಣ ಇರಿ. ಈಗಾಗಲೇ ಎರಡನೇ ಬಾರಿಗೆ ಅವರು ಮಾತನಾಡಲು ಎದ್ದು ನಿಂತಿದ್ದಾರೆ.

ಶ್ರೀ ಕೆ. ಶ್ರೀನಿವಾಸಗೌಡ ಕುಡುವನಹಳ್ಳಿ : ಮಾನ್ಯ ಅಧ್ಯಕ್ಷರಲ್ಲಿ ನನ್ನದೊಂದು ವಿನಂತಿ ಇದೆ. ಅದಾದ ನಂತರ ಮಾನ್ಯ ಮಂತ್ರಿಗಳೇ ಮಾತನಾಡಲಿ.

ಅಧ್ಯಕ್ಷರು : ಮಾನ್ಯ ಶ್ರೀನಿವಾಸಗೌಡರೇ, ತಮ್ಮ ನಾಯಕರಾದ ಸೋಮಶೇಖರ್‌ರವರು ಆಗಲೇ ಮಾತನಾಡಿದ್ದಾರಲ್ಲಾ.

ಶ್ರೀ ಕೆ. ಶ್ರೀನಿವಾಸಗೌಡ ಕುಡುವನಹಳ್ಳಿ : ಮಾನ್ಯ ಅಧ್ಯಕ್ಷರೇ, ನಾನು ಒಂದೇ ನಿಮಿಷ ಮಾತನಾಡಿ ಬಿಡುತ್ತೇನೆ. ಅನೇಕ ಗಹನವಾದ ವಿಚಾರಗಳು ಇವತ್ತು ನಮ್ಮ ಮುಂದಿವೆ. ಬರ ಇರಬಹುದು, ಕುಡಿಯುವ ನೀರು ಇರಬಹುದು, ಕರೆಂಟ್ ಇರಬಹುದು, ಇಂತಹ ಪರಿಸ್ಥಿತಿಯಲ್ಲಿ ನಮಗೆ ಕೆಲವು ಅಂಶಗಳ ಬಗ್ಗೆ ಸರ್ಕಾರದಿಂದ ಉತ್ತರ ಬರಬೇಕಾಗಿದೆ. ಮಾನ್ಯ ರೋಷನ್ ಬೇಗ್‌ರವರ ಬಗ್ಗೆ ಮಾನ್ಯ ಸಿಂಧ್ಯರವರು ಬಹಳ ಚೆನ್ನಾಗಿ ಹೇಳಿದರು. ಯಾವುದೇ ಮಂತ್ರಿ ರಾಜೀನಾಮೆ ಕೊಟ್ಟು ಬೇರೆ ದೇಶಕ್ಕೆ ಹೋಗಬೇಕಾದರೆ ಇದರ ಒಳಗೆ ಏನೋ ಒಳಗುಟ್ಟು ಇರಬಹುದು ಎನ್ನುವ ಅನುಮಾನ ಇಡೀ ರಾಜ್ಯಕ್ಕೆ ಬಂದಿದೆ. ಇವರು ರಾಜೀನಾಮೆ ಕೊಟ್ಟು ಬೇರೆ ದೇಶಕ್ಕೆ ಹೋಗಿದ್ದಾರೆ. ಇವರು ಮತ್ತೆ ಈ ದೇಶಕ್ಕೆ ಬರುತ್ತಾರೋ ಇಲ್ಲವೋ ಎನ್ನುವ ಊಹಾಪೋಹಗಳು ಪತ್ರಿಕೆಗಳಲ್ಲಿ ಬರುತ್ತಿವೆ. ಇದನ್ನು ನಾನು ಏಕೆ ಹೇಳುತ್ತಿದ್ದೇನೆ ಎಂದರೆ, ನೀವು ಕರೆದಿರುವ ಅಧಿವೇಶನ 14ನೇ ತಾರೀಖಿನವರೆಗೆ ಎಂದು

ಹೇಳುತ್ತೀರಿ, ಈ ಸಮಯದಲ್ಲಿ ಇನ್ನು ರಾಜ್ಯಪಾಲರ ಭಾಷಣದ ಬಗ್ಗೆ ಮಾತನಾಡಬೇಕು, ಇನ್ನು ಅನೇಕ ಸಮಸ್ಯೆಗಳು ಇವೆ, ಕಿತ್ತು ತಿನ್ನುವ ಬರ ಇದೆ, ನಮ್ಮ ಜಿಲ್ಲೆಗಳಲ್ಲಿ ಕುಡಿಯುವ ನೀರಿಗೆ ದುಡ್ಡು ಕೊಟ್ಟಿಲ್ಲ. ಬೋರ್‌ವೆಲ್‌ಗೆ ಡೀಸೆಲ್ ಇಲ್ಲವೆಂದು ಹೇಳುತ್ತಾರೆ. ಪಂಪ್‌ಸೆಟ್‌ಗಳು ಕೊಟ್ಟಿಲ್ಲ. ಇಂತಹ ವಿಷಯಗಳನ್ನೆಲ್ಲಾ ಮಾತನಾಡಬೇಕಾಗಿರುವುದರಿಂದ ಸರ್ಕಾರಕ್ಕೆ ನಾನು ಒಂದು ವಿನಂತಿ ಮಾಡಿಕೊಳ್ಳುತ್ತೇನೆ, ದಯವಿಟ್ಟು ನಮ್ಮ ಆಗ್ರಹ ಏನಿದೆ, ಆ ಆಗ್ರಹಕ್ಕೆ ಉತ್ತರ ಕೊಟ್ಟು ಅವರ ಮೇಲೆ ಕ್ರಮ ಜರುಗಿಸುತ್ತೇವೆಂದು ಹೇಳಿದರೆ ನಾವು ವಿರೋಧ ಪಕ್ಷದವರು ಅದನ್ನು ಒಪ್ಪಿಕೊಳ್ಳುತ್ತೇವೆ. ಅವರು ತಪ್ಪು ಮಾಡಿದ್ದಾರೆ. ತಪ್ಪು ಮಾಡಿದವರ ಮೇಲೆ ಕ್ರಮ ಜರುಗಿಸುತ್ತೇವೆಂದು ಹೇಳಿದರೆ ನಮ್ಮ ಅಭ್ಯಂತರವಿಲ್ಲ. ನಾವು ಇನ್ನೂ ಅನೇಕ ಗಹನವಾದ ವಿಚಾರಗಳನ್ನು ಮಾತನಾಡಬೇಕಾಗಿದೆ. ಇಲ್ಲವೆಂದರೆ, ಅದಕ್ಕೂ ಇದಕ್ಕೂ ಸಂಬಂಧವಿಲ್ಲವೆಂದು ಹೇಳಲಿ.

ಶ್ರೀ ಡಿ. ಬಿ. ಚಂದ್ರೇಗೌಡ : ಮಾನ್ಯ ಸಭಾಧ್ಯಕ್ಷರೆ, ನಾವು ಪ್ರತಿಪಕ್ಷದ ಮುಖಂಡರ ಮಾತುಗಳನ್ನು ಕೇಳಿದ್ದೇವೆ. ಅನೇಕರು ಹೇಳಿದ್ದನ್ನು ಇಲ್ಲಿ ಹೇಳಬೇಡಿ ಎಂದು ಹೇಳಿದ್ದಾರೆ. ಮಾನ್ಯ ಚನ್ನಿಗಪ್ಪನವರು ಏನು ಹೇಳಿದರು, ಬಹಳ ಸೊಗಸಾಗಿ ಮಾತನಾಡಿದರು, ಎಲ್ಲರಿಗೂ ಕನ್‌ವಿನ್ಸಿಂಗ್ ಆಗಿ ಉತ್ತರ ಕೊಟ್ಟರು ಎಂದು ಹೇಳಿದರು. ನಾನು ಹೇಳುವುದಲ್ಲ ಇದು.

ಶ್ರೀ ಸಿ. ಚನ್ನಿಗಪ್ಪ : ಸತ್ಯಾಂಶ ಇಲ್ಲ, ಬುಕ್ ಪ್ರಿಂಟ್ ಮಾಡಿ ಜನರಿಗೆ ಮಾಡಿದ ಮೋಸದ ಕೆಲಸ ಅದು. ಅನ್ಯಾಯ ಅಕ್ರಮದ ಪರಮಾವಧಿಯಾಗಿದೆ.

ಶ್ರೀ ಬಿ. ಸೋಮಶೇಖರ್ : ರೆಕಾರ್ಡ್‌ಗೆ ತಪ್ಪು ಹೋಗಬಾರದು.

(ಗೊಂದಲ)

ಶ್ರೀ ಬಿ. ಸೋಮಶೇಖರ್ : ಸನ್ಮಾನ್ಯ ಅಧ್ಯಕ್ಷರೇ, Records should be straight. ಒಂದು ನಿಮಿಷ ತಾಳಿ ತಾವು ಬಹಳ ಬುದ್ಧಿವಂತಿಕೆಯಿಂದ ಮಾತನಾಡಿದಿರಿ.

ಶ್ರೀ ಡಿ. ಬಿ. ಚಂದ್ರೇಗೌಡ : ಒಬ್ಬ ಸಾಮಾನ್ಯ ಗ್ರಾಮೀಣ ಮನುಷ್ಯನಾಗಿ ಅವರು ಹೇಳಿದ್ದನ್ನು ನಾನು ಹೇಳಿದ್ದು ಅಷ್ಟೆ.

ಶ್ರೀ ಬಿ. ಸೋಮಶೇಖರ್ : ನಾನು ಹೇಳಿದ್ದು ಏನೆಂದರೆ, ಮಾನ್ಯ ಖರ್ಗೆಯವರು ಸರ್ಕಾರದಿಂದ ಯಾವ ಉತ್ತರವನ್ನು ಕೊಡಬಹುದು ಅದನ್ನು ಬಹಳ ಚೆನ್ನಾಗಿ ಬುದ್ಧಿವಂತಿಕೆಯಿಂದ ಸರ್ಕಾರದ ಉತ್ತರವನ್ನು ಕೊಟ್ಟಿದ್ದೀರಿ. ಆದರೆ ನಾವು ಕೊಟ್ಟಂತಹ ವಿಚಾರಗಳಿಗೂ ಅದಕ್ಕೂ ಸಂಬಂಧ ಇಲ್ಲ. ನೀವು ಯಾವ ರೀತಿ ತಪ್ಪಿಸಿಕೊಳ್ಳಬಹುದು ಆ ರೀತಿ ಬಹಳ ಚೆನ್ನಾಗಿ ಉತ್ತರ ಕೊಟ್ಟಿದ್ದೀರಿ. ಆದರೆ ನೀವು ಏನು ವೈಟ್ ಪೇಪರ್ ಇಟ್ಟಿದ್ದೀರಿ, ಅದಕ್ಕೂ ನಿಮ್ಮ ಉತ್ತರಕ್ಕೂ ತದ್ವಿರುದ್ಧವಾಗಿದೆ. ನಿಮಗೆಲ್ಲಾ ತಣ್ಣೀರೆರಚಿದೆ. ಕ್ಲೀನ್ ಬೋಲ್ಡ್ ಔಟ್ ಆಗಿ ಬಿಟ್ಟಿರಿ ಎಂದು ಹೇಳಿದೆ ನಾನು. ನೀವು ಒಳ್ಳೆಯ ಉತ್ತರ ಕೊಟ್ಟಿರಿ ಎಂದು ನಾವೇನೂ ಹೇಳಲಿಲ್ಲ. ನಿಮ್ಮ ಸರ್ಕಾರದಿಂದ ಯಾವ ಉತ್ತರ ಕೊಡಬೇಕಾಗಿತ್ತು ಅದನ್ನು ಬುದ್ಧಿವಂತಿಕೆಯಿಂದ ಕೊಟ್ಟಿರಿ ಎಂದು ಹೇಳಿದ್ದೇವೆ.

ಶ್ರೀ ಕೆ. ಶ್ರೀನಿವಾಸಗೌಡ (ಕುಡುವನಹಳ್ಳಿ) : 'ಅಜ್ಜನಿಗೆ ಕೆಮ್ಮುವುದು ಕಲಿಸಬೇಕಾಗಿಲ್ಲ' ಖರ್ಗೆಯವರಿಗೆ ಇಷ್ಟೊಂದು ಅನುಭವ ಇರುವವರಿಗೆ ಕೆಮ್ಮುವುದು ಹೇಳಿಕೊಡಬೇಕಾ? ಅವರಿಗೆ ಮಾತಾಡುವುದು ಕನ್‌ವಿನ್ಸ್ ಮಾಡುವುದು ಹೇಳಿಕೊಡಬೇಕೆ? ಅವರು ಕನ್‌ವಿನ್ಸ್ ಮಾಡುವುದಕ್ಕೆ ಪ್ರಯತ್ನ ಮಾಡಿದರು.

ಶ್ರೀ ಸಿ. ಚನ್ನಿಗಪ್ಪ : ನಮ್ಮ ಕಾನೂನು ಸಚಿವರು ಈ ರಾಜ್ಯಕ್ಕೆ ನ್ಯಾಯ ಕೊಡುವವರು. ದಯಮಾಡಿ ಏನು ಅನ್ಯಾಯವಾಗಿದೆ ಆ ನ್ಯಾಯವನ್ನು ಕೊಡಿಸಲಿ. ನಾವೆಲ್ಲಾ ರಾಜ್ಯದ ಹಾಗೂ ರಾಷ್ಟ್ರದ ಜನತೆ ಸುಮ್ಮನೆ ಕೂರುತ್ತೇವೆ. ಇದು ಕೋಟ್ಯಾಂತರ ರೂಪಾಯಿಗಳ ಹಗರಣ. ಈ ರಾಜ್ಯ ಮತ್ತು ರಾಷ್ಟ್ರವನ್ನು ಹಾಳು ಮಾಡಿದ ಹಿನ್ನೆಲೆ ಕೃತ್ಯ ಏನಿದೆ ಅದಕ್ಕೆ ಉತ್ತರ ಕೊಡಬೇಕೆಂದು ತಮ್ಮ ಮುಖಾಂತರ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಡಿ. ಬಿ. ಚಂದ್ರೇಗೌಡ : ಮಾನ್ಯ ಸಭಾಧ್ಯಕ್ಷರೆ, ಪ್ರತಿ ಪಕ್ಷದ ನಾಯಕರು ಕೆಲವು ಡಿಮಾಂಡ್ಸ್ ಇಟ್ಟಿದ್ದಾರೆ. ಹಾಗೆಯೇ ಮಾನ್ಯ ಸಿಂಧ್ಯರವರು ಹಾಗೂ ಮಾನ್ಯ ಶ್ರೀನಿವಾಸಗೌಡರು ಮತ್ತು ಮಾನ್ಯ ಸೋಮಶೇಖರ್‌ರವರು ಕೇಳಿದ್ದಾರೆ. ನಾನು ಸಂಸದೀಯ ವ್ಯವಹಾರಗಳ ಸಚಿವನಾಗಿ ಸದನ ನಡೆಯಬೇಕೆಂದು ಹೇಳುವವನು. ನಾನು ನನ್ನ ಅಭಿಪ್ರಾಯವನ್ನು ಮಾತ್ರ ಹೇಳುತ್ತಿಲ್ಲ, ನಮ್ಮ ಸರ್ಕಾರದ ಅಭಿಪ್ರಾಯವನ್ನು ಹೇಳುತ್ತಿದ್ದೇನೆ. ಸದನ ನಡೆಯಬೇಕು. ಸದನ ನಡೆಯುವುದಕ್ಕೆ ಬಾಧಕ ಏನು? ಮಾನ್ಯ ವಿರೋಧ ಪಕ್ಷದ ನಾಯಕರು ಬರೀ ಸದಸ್ಯರು ವಿರೋಧ ಪಕ್ಷದ ನಾಯಕರು ಅಲ್ಲ. ಹಿರಿಯ ವಕೀಲರೂ ಕೂಡ ಇದ್ದಾರೆ. ನನ್ನ ಹಾಗೆ ಅನೇಕ ಜನ ವಕೀಲರೂ ಕೂಡ ಇದ್ದಾರೆ. ಯಾವುದೇ ಒಂದು ಫಿರ್ಯಾದಿ ಕೊಟ್ಟ ಮೇಲೆ ಅಪರಾಧಿಗೆ ತನಿಖೆ ಮಾಡುವುದು ಅಪರಾಧಿ ಸರಿ ತಪ್ಪು ಎಂದು ನಿರ್ಣಯ ಮಾಡುವ ಅಧಿಕಾರ ಒಂದು ಕಡೆ ಅಲ್ಲಿ ಇನ್‌ವೆಸ್ಟಿಗೇಟಿಂಗ್ ಆಫೀಸರ್ ಮಾಡಬೇಕು, ಇನ್ನೊಂದು ಕಡೆ ಕೋರ್ಟ್ ಮಾಡಬೇಕು. ನಮಗೆ ಗೊತ್ತಿರುವ ಕಾನೂನು ಕ್ರಿಮಿನಲ್ ಪ್ರೊಸೀಜರ್ ಕೋಡ್‌ನಲ್ಲಿ ಯಾರು ಅಪರಾಧಿ ಎಂದು ಕರೆಯುತ್ತಾರೆ ಅಂತಹವರಿಗೆ ಸ್ಟೇಷನ್ ಹೌಸ್ ಆಫೀಸರ್ ಅರೆಸ್ಟ್ ಮಾಡುತ್ತಾರೆ. ನೀವು ಬಂಧಿಸಿ, ನೀವು ಬಂಧಿಸಿ ಎಂದು ಸರ್ಕಾರಕ್ಕೆ ಹೇಳಿದರೆ ಹೇಗೆ? ಈ ಸದನ ನಡೆಯಬೇಕೆಂದು ಏನು ಹೇಳುತ್ತಿದ್ದೀರಿ, ಸದನ ನಡೆಯಬೇಕು ನಮ್ಮ ನಿಯಮಗಳ ಪ್ರಕಾರ. ತಮಗೆ ಅಧಿಕರ ಇತ್ತು ನಿಲುವಳಿ ಸೂಚನೆಯನ್ನು ನಿಯಮ 69ಕ್ಕೆ ಬದಲಾವಣೆ ಮಾಡಿದ್ದೀರಿ. ನಿಯಮದ ಪ್ರಕಾರ ಬದಲಾವಣೆ ಮಾಡಿದ್ದೀರಿ. ಇಲ್ಲಿಯೂ ಕೂಡ ಕ್ರಿಮಿನಲ್ ಪ್ರೊಸೀಜರ್ ಕೋಡ್ ನಿಯಮದ ಪ್ರಕಾರ ಇನ್‌ವೆಸ್ಟಿಗೇಷನ್ ನಡೆಯಬೇಕೇ ಹೊರತು ನಿಯಮ ಮೀರಿ ಸರ್ಕಾರ ಬಂಧಿಸಿ ಎಂದು ಹೇಳಿದರೆ ಯಾರಿಗಾದರೂ ಬಂಧಿಸುವುದಕ್ಕಾಗುತ್ತಾ? ರೆಗ್ಯುಲರ್ ಡೆಮಾಕ್ರಟಿಕ್ ಪ್ರೊಸೀಜರ್ ಪ್ರಕಾರ ಬಂಧಿಸಬೇಕಾಗುತ್ತದೆ. ತುರ್ತು ಪರಿಸ್ಥಿತಿ ಇದ್ದರೆ ಬೇರೆ ವಿಚಾರ. ಅಥವಾ ಇನ್ನಾವುದೋ ಸಂದರ್ಭಗಳಿದ್ದರೆ ಬೇರೆ. ನಾರ್ಮಲ್ ಸರ್ಕಮಸ್ಟೆನ್ಸ್‌ನಲ್ಲಿ ಜನ ತಂತ್ರ ವ್ಯವಸ್ಥೆಯೊಳಗೆ ಶಾಸನಗಳ ಪ್ರಕಾರ ನಡೆಯಬೇಕು. ಬಂಧಿಸಿ ಎಂದು ಹೇಳಿದರೆ ಏನು ಕಾರಣ ಕೊಟ್ಟು ಬಂಧಿಸುವುದು? ಯಾರು ಬಂಧಿಸಬೇಕು, ಎಲ್ಲಿದೆ ಸರ್ಕಾರಕ್ಕೆ ಅಧಿಕಾರ, ಅವರ ಆಸ್ತಿ ಮುಟ್ಟುಗೋಲು ಹಾಕಿಕೊಳ್ಳಿ ಎಂದು ಹೇಳುತ್ತಾರೆ. ಬಂಧನವೇ ಮಾಡಿಲ್ಲ, ಆಸ್ತಿ ಮುಟ್ಟುಗೋಲು ಹಾಕಿಕೊಳ್ಳುವುದು ಇರಬಹುದು, ಮತ್ತು ಯಾವುದೋ ಪಾಲಿಗ್ರಾಫಿ...

ಶ್ರೀ ಎಸ್.ಎಸ್. ಪಾಟೀಲ್ : ತಪ್ಪು ಕಂಡುಬಂದರೆ ವಿಚಾರಣೆ ಮಾಡಿ ಅವನಿಗೆ ಬಂಧಿಸುತ್ತೇವೆಂದು ಹೇಳಿ.

Sri D.B. Chandregowda : I would seek the indulgence of senior counsel member Sri Subbareddy. ತಾವು ಹೇಳಿದ ಹಾಗೆ ಸೀನಿಯರ್ ಕೌನ್ಸಿಲ್ ಮೆಂಬರ್ ಸುಬ್ಬಾರೆಡ್ಡಿಯವರು ಇದ್ದಾರೆ. ಏಕೆಂದರೆ ಅವರು ವಕೀಲರಲ್ಲಿ ವಕೀಲರು. ಅವರ ವೃತ್ತಿಯೂ ಅದೇ. ಅವರು ಸರ್ಕಾರಕ್ಕೆ ಬಂಧಿಸುವುದಕ್ಕೆ ಅಧಿಕಾರ ಇದೆಯಾ ಎಂದು ಹೇಳಲಿ. ಯಾವುದಾದರೂ

ಶಾಸನದ ಕೆಳಗೆ ಬಂಧಿಸಲಿ ಎಂದು ಅವರು ಹೇಳಿ ಬಿಡಲಿ. ಆಗ ಆ ನಿಯಮದ ಪ್ರಕಾರ ಬಂಧನ ಮಾಡಿಬಿಡೋಣ.

ಶ್ರೀ ಎಸ್.ಎಸ್. ಪಾಟೀಲ್ : ಅಧ್ಯಕ್ಷರೆ, ಅವರ ಬಾಯಿಂದ ಒಂದು ಮಾತು ಹೇಳಿಸಿ ಬಿಡಿ. ಒಂದು ವೇಳೆ ವಿಚಾರಣೆ ಮಾಡಿ ಮಾನ್ಯ ರೋಶನ್ ಬೇಗ್‌ರವರು ತಪ್ಪಿತಸ್ತರಾದರೆ ಅವರನ್ನು ಬಂಧಿಸುತ್ತೇವೆಂದು ಹೇಳಿ ಬಿಡಲಿ. ನೀವು ಅದನ್ನೇ ಹೇಳುವುದಕ್ಕೆ ತಯಾರಿಲ್ಲ.

ಶ್ರೀ ಡಿ. ಬಿ. ಚಂದ್ರೇಗೌಡ : ಬಂಧನವಾಗಲಿ, ಆಸ್ತಿ ಮುಟ್ಟುಗೋಲು ಹಾಕಿಕೊಳ್ಳುವುದಾಗಲಿ, ಪಾಲಿಗ್ರಾಫಿ ಟೆಸ್ಟ್ ಮಾಡಿದ್ದಾರೆ, ಮತ್ತೊಂದು ಮಾಡಿದ್ದಾರೆ, this is all a matter of investigative agency which will submit its report to be considered in the Court. Investigating agency has been changed now. ನೀವು ಮಾಡಿದ್ದು ಸರಿ ಇಲ್ಲ, ಸಿಬಿಐಗೆ ಕೊಡಿ ಎಂದು ಹೇಳಿದಿರಿ, ಸಿಬಿಐಗೆ ಕೊಟ್ಟಿದ್ದೇವೆ. ಅಲ್ಲಿ ನೀವು ಹಾಜರು ಮಾಡಿ, ದಾಖಲೆಗಳಿದ್ದರೆ ಅವನಿಗೆ ಬಂಧಿಸಲಿ; ಯಾರು ಬೇಡವೆಂದು ಹೇಳುತ್ತಿದ್ದಾರೆ, ನಾವು ಬೇಡವೆಂದು ಹೇಳಲಿಲ್ಲ. ಅವರು ಬಂದು ಆಸ್ತಿ ಮುಟ್ಟುಗೋಲು ಹಾಕಿಕೊಳ್ಳಲಿ. It is not the business of the Government. It is the business of the investigating agency. ರೆಗ್ಯುಲರ್ ಏಜೆನ್ಸಿ ಫೇಲಾಯಿತು, ಸಿಓಡಿಗೆ ಕೊಟ್ಟೆವು. ಸಿಓಡಿ ಫೇಲಾಯಿತು, ಸಿಬಿಐಗೆ ಕೊಟ್ಟೆವು, ಸಿಬಿಐಗೆ ನೀವು ಹೇಳುವುದನ್ನೆಲ್ಲಾ ಅಲ್ಲಿ ಹೇಳಿ ಅವರು ವಿಚಾರಣೆ ಮಾಡಲಿ, ವಿಚಾರಣೆಯಲ್ಲಿ ತಪ್ಪಿತಸ್ತ ಎಂದು ಕಂಡುಬಂದರೆ ಯಾವ ಶಿಕ್ಷೆ ವಿಧಿಸಬಹುದು, ಯಾವಾಗ ಬಂಧನ ಮಾಡಬಹುದು It is left to them. How can any government direct a person to be arrested unless there is an incriminating evidence? ನಮ್ಮ ಮಾನ್ಯ ರೆಡ್ಡಿಯವರು ನಮಗೆ ಗೈಡ್ ಮಾಡಲಿ He is a senior counsel. I respect him as a senior counsel. Because he was representing the advocates. Let him guide. He is a senior counsel. I don't know whether he is a criminal advocate or not.

Sri K. Srinivasagowda (Kuduvana Hally) : He is not a criminal Advocate.

ಶ್ರೀ ಡಿ. ಬಿ. ಚಂದ್ರೇಗೌಡ : ನೀವು ಯಾರು ಸರ್ಟಿಫಿಕೇಟ್ ಕೊಡುವುದಕ್ಕೆ? ನಿಮಗೆಲ್ಲಿದೆ ಅಧಿಕಾರ ಸರ್ಟಿಫಿಕೇಟ್ ಕೊಡುವುದಕ್ಕೆ? ಅವರು ವಕೀಲಿ ಹೇಗೆ ಮಾಡುತ್ತಾರೆಂದು ನನಗೆ ಗೊತ್ತಿದೆ.

ಶ್ರೀ ಕೆ. ಶ್ರೀನಿವಾಸಗೌಡ (ಕುಡುವನ ಹಳ್ಳಿ) : ಅವರ ಹೆಸರು ಹೇಳಿ ಹೇಳಿ ತಿಳಿ ಮಾಡಲಿಕ್ಕೆ ಹೋಗುತ್ತಿದ್ದೀರಿ. ತಿಳಿ ಮಾಡಬೇಡಿ. ಇರುವ ವಿಷಯವನ್ನು ಹೇಳಿ.

ಶ್ರೀ ಡಿ. ಬಿ. ಚಂದ್ರೇಗೌಡ : ಮಾನ್ಯ ಸಿಂಧ್ಯರವರು ಕೆಲವು ರಿಲವೆಂಟ್ ವಿಚಾರಗಳನ್ನು ಎತ್ತಿದ್ದಾರೆ.

(ಬಿಜೆಪಿ ಸದಸ್ಯರುಗಳು ಬಾವಿಯಲ್ಲಿ ಧರಣಿ ಮುಂದುವರೆಸಿದ್ದರು)

ಶ್ರೀ ಬಿ. ಬಿ. ಶಿವಪ್ಪ : ಮಾನ್ಯ ಚಂದ್ರೇಗೌಡರೇ, ತಾವು ಮಾನ್ಯ ಸುಬ್ಬಾರೆಡ್ಡಿಯವರು ಕಾನೂನಿನ ಕ್ಷೇತ್ರದಲ್ಲಿರುವವರು ಅವರು ಹೇಳುತ್ತಾರೆ ಎಂದು ಹೇಳುತ್ತಿದ್ದೀರಲ್ಲಾ, ಇಲ್ಲಿ ಅವರು ಹೇಳುವುದಿಲ್ಲ. ಹೈಕೋರ್ಟಿನಲ್ಲಿ ಅದರ ಬಗ್ಗೆ ಹೇಳುತ್ತಾರೆ. ಇಲ್ಲಿ ಹೇಳು ಹೇಳು ಎಂದರೆ ಅವರೇನು ಹೇಳುತ್ತಾರೆ? ಬಾವಿಯೊಳಗೆ ನಿಂತುಕೊಂಡು ಏನು ಹೇಳುತ್ತಾರೆ?

Sri D. B. Chandregowda : Let him guide the House. ಮಾನ್ಯ ಸಿಂಧ್ಯಾರವರು ಬಹಳ ಪ್ರಮುಖವಾದಂತಹ ಕೆಲವು ವಿಚಾರಗಳನ್ನು ಎತ್ತಿದ್ದಾರೆ. ಆದರೆ ಅವರು ಈ ಪ್ರಕರಣವನ್ನು ಎತ್ತಿದ್ದಾರೆ ನಿಜ. ಉತ್ತರ ಯಾರು ಕೊಡಬೇಕು ಎಂಬುದನ್ನು ಅವರು ಹೇಳಲಿಲ್ಲ. ಅವರೂ ಹೋಮ್ ಮಿನಿಷ್ಟರ್ ಆಗಿದ್ದವರು. ಅವರು ಏನು ಕೇಳುತ್ತಾರೆ? ರಾಜೀನಾಮೆ ಕೊಡುವಂತಹ ಪರಿಸ್ಥಿತಿ; ಆ ಮನುಷ್ಯ ಹೇಳಬೇಕೇ ಹೊರತಾಗಿ ಇನ್ಯಾರು ಅವರ ಪರವಾಗಿ ಹೇಳುವುದಕ್ಕೆ ಆಗುತ್ತದೆ? ನಾಳೆ ನಾನು ರಾಜೀನಾಮೆ ಕೊಟ್ಟು ಹೋದರೆ ನಾನು ಹೇಳಬೇಕೇ ಹೊರತು, ಏಕೆ ರಾಜೀನಾಮೆ ಕೊಟ್ಟೆ ಎಂದು ಬೇರೆಯವರನ್ನು ಕೇಳುವುದಕ್ಕೆ ಆಗುತ್ತದೆಯೇ?

(ಗೊಂದಲ)

ಶ್ರೀ ಡಿ. ಬಿ. ಚಂದ್ರೇಗೌಡ : ನಾನು ಅವರನ್ನು ಕೇಳಿದೆ, ನಿಮ್ಮ ತಲೆ ಏಕೋ ನುಣ್ಣಗೆ ಇದೆಯಲ್ಲಾ ಎಂದು ಕೇಳಿದೆ. ಇಲ್ಲ ಸಾರ್ ನಾನು ದೇವರಿಗೆ ಹೋಗಿದ್ದೆ, ತಲೆ ಬೋಳಿಸಿದೆ ಎಂದರು. ಹಾಗೆಯೇ ಅವರೂ ದೇವರಿಗೆ ಹೋಗಿದ್ದಾರೆ ತಪ್ಪೇನು? ಇವರು ತಲೆ ಬೋಳಿಸಿಕೊಂಡು ಬಂದಿದ್ದಾರೆ, ಅವರು ದೇವರಿಗೆ ಹೋಗಿದ್ದಾರೆ.

(ಗೊಂದಲ)

ಶ್ರೀ ಡಿ. ಬಿ. ಚಂದ್ರೇಗೌಡ : ನೀವೇ ಹೇಳಿದ್ದು ನನಗೆ ಗೊತ್ತಿಲ್ಲ. ಅವರು ಹೇಳಿದ್ದು ನಾನು ದೇವರಿಗೆ ಹೋಗಿದ್ದೆ ಅದಕ್ಕೋಸ್ಕರ ತಲೆ ಬೋಳಿಸಿದ್ದೇನೆ ಎಂದರು.

ಶ್ರೀ ಆರಗ ಜ್ಞಾನೇಂದ್ರ : ಸಾರ್, ತಿರುಪತಿಗೆ ಹೋದರೆ ನಮ್ಮ ತಲೆ ನಾವು ಬೋಳಿಸಿಕೊಂಡು ಬರುತ್ತೇವೆ. ಇವರು ಎಲ್ಲರದ್ದೂ ತಲೆ ಬೋಳಿಸಿ ಹೋಗಿದ್ದಾರಲ್ಲಾ!

ಶ್ರೀ ಡಿ. ಬಿ. ಚಂದ್ರೇಗೌಡ : ಅದು ಸರಿ, ಅವರೂ ಕೂಡ ನೀವು ತಿರುಪತಿಗೆ ಹೋದರೆ ಎಷ್ಟು ಶ್ರೇಷ್ಠ ಎಂದು ಅಂದುಕೊಳ್ಳುತ್ತೀರೋ ಅವರದ್ದೂ ಅಲ್ಲಿಗೆ ಹೋಗತಕ್ಕ ಪದ್ಧತಿ ಇದೆ. ಅಷ್ಟೇ ಪವಿತ್ರವಾದುದು ಅವರು ಆ ಕೆಲಸಕ್ಕೆ ಹೋಗಿದ್ದರೆ, How can we stop?

ಶ್ರೀ ಎಸ್.ಎಸ್. ಪಾಟೀಲ್ : ಅವರು ರಾಜೀನಾಮೆ ಕೊಟ್ಟಿದ್ದಾರೆ ಎಂದು ಹೇಳುತ್ತೀರಲ್ಲಾ, ಅಧ್ಯಕ್ಷರೆ, ಅವರು ರಾಜೀನಾಮೆ ಕೊಟ್ಟಿಲ್ಲ. ಇವರು ತೆಗೆದುಕೊಂಡಿದ್ದಾರೆ. ರಾಜೀನಾಮೆ ತೆಗೆದುಕೊಂಡವರು ಹೇಳಬೇಕು ಏಕೆ ತೆಗೆದುಕೊಂಡಿದ್ದೇವೆಂದು ಹೇಳಬೇಕು.

ಅಧ್ಯಕ್ಷರು : ಅವರು ಕಂಪ್ಲೀಟ್ ಮಾಡಲಿ.

ಶ್ರೀ ಎಸ್.ಎಸ್. ಪಾಟೀಲ್ : ರಾಜೀನಾಮೆ ಕೊಟ್ಟಿದ್ದಾರೆಂದು ಇಲ್ಲಿ ತಪ್ಪು ಹೇಳುತ್ತಾರೆ, ಅವರು ರಾಜೀನಾಮೆ ಕೊಟ್ಟೇ ಇಲ್ಲ. ಇವರು ತೆಗೆದುಕೊಂಡಿದ್ದಾರೆ.

Mr. Speaker : Let him complete.

ಶ್ರೀ ಡಿ. ಬಿ. ಚಂದ್ರೇಗೌಡ : ಮಾನ್ಯ ಅಧ್ಯಕ್ಷರೆ, ಈಗಲೂ ಹೇಳುತ್ತೇವೆ, ಮಾನ್ಯ ಎಸ್.ಎಸ್.ಪಾಟೀಲ್ ಅವರಿಗೆ. ಅವರು ಬಹಳ ಹಿರಿಯರು, ಮಾಜಿ ಮಂತ್ರಿಗಳು ಆಗಿದ್ದರು. ಮಾಜಿ ಮಂತ್ರಿ ಜೊತೆಗೆ ಬಹಳ ಹಿರಿಯ ಸದಸ್ಯರು. ಅವರು ಸಭೆಯನ್ನು ಸರಿ ದಾರಿಗೆ ತೆಗೆದುಕೊಂಡು ಹೋಗಬೇಕು. ನಾವು ಶಬ್ದಗಳನ್ನು ಬಳಕೆ ಮಾಡುವಾಗ, ಸ್ವಲ್ಪ ಕನ್ನಡವನ್ನು ನಾವೂ ಅವರಿಂದ ಕಲಿತಿದ್ದೇವೆ. ನಾವೇನು ಹೇಳಿದ್ದೇವೆ? ಅವರು ರಾಜೀನಾಮೆ ಕೊಟ್ಟಿದ್ದಾರೆಂದು ಹೇಳಿದ್ದೇವೆ. ನಾವು ರಾಜೀನಾಮೆ ತೆಗೆದುಕೊಂಡಿದ್ದೇವೆಂದು ಎಲ್ಲೂ ಹೇಳೇ ಇಲ್ಲವಲ್ಲಾ. ರಾಜೀನಾಮೆ ಕೊಟ್ಟು ಹೋಗಿದ್ದಾರೆ. ಅವರು ಬಂದ ಮೇಲೆ ಕೇಳಿ ಏಕೆ ಕೊಟ್ಟಿರಿ ಎಂದು ಕೇಳಿ.

(ಬಿಜೆಪಿ ಸದಸ್ಯರು ಬಾವಿಯಿಂದ ಮಾತನಾಡುತ್ತಿದ್ದರು)

(ಗೊಂದಲ)

ಶ್ರೀ ಡಿ. ಬಿ. ಚಂದ್ರೇಗೌಡ : ಎಲ್ಲೂ ಹೋಗುವುದಿಲ್ಲ. ನೀವು ನಿರೀಕ್ಷೆ ಮಾಡಿದ ಹಾಗೆ ನಾವು ನಿರೀಕ್ಷೆ ಮಾಡುವುದಿಲ್ಲ.

ಶ್ರೀ ಸಿ. ಆರ್. ಸಗೀರ್ ಅಹಮದ್ : ಇಲ್ಲ, ಇಲ್ಲ. ಇವರಿಗೆ ಅನುಮಾನ ಏನು ಅಂದರೆ ಇವರ ಕಡೆಯವರು ಹೋಗಿರುವವರು ವಾಪಸ್ಸೇ ಬರಲಿಲ್ಲ, ಅದರಿಂದ ಅವರ ಮೇಲೆ ಇವರಿಗೆ ಅನುಮಾನ. ನಿಮ್ಮ ಕಡೆ ಹೋದರಲ್ಲಾ, ಅವರು ವಾಪಸ್ ಬರಲಿಲ್ಲ. ಆದ್ದರಿಂದ ಇವರ ಮೇಲೆ ನಿಮಗೆ ಅನುಮಾನ.

(ಬಿಜೆಪಿ ಸದಸ್ಯರು ಬಾವಿಯಿಂದ ಮಾತನಾಡುತ್ತಿದ್ದರು)

(ಗೊಂದಲ)

ಶ್ರೀ ಸಿ. ಆರ್. ಸಗೀರ್ ಅಹಮದ್ : ನಿಮ್ಮ ಕಡೆಯವರೂ ಅದೇ ತರಹ ಹೊಡೆಸಿಕೊಂಡಿದ್ದಾರಲ್ಲಾ, ಮಾನ್ಯ ಗೃಹ ಮಂತ್ರಿಗಳು ನಿನ್ನೆ ಫೋಟೋ ತೋರಿಸಿದರಲ್ಲಾ. ಇನ್ನೂ 4–5 ಫೋಟೋಗಳು ಇವೆಯಂತೆ, ನಾಳೆ ನಾಡಿದ್ದು ಫೋಟೋ ತೋರಿಸುತ್ತಾರಂತೆ, ನೋಡಿ.

(ಗೊಂದಲ)

ಅಧ್ಯಕ್ಷರು : ಮಾನ್ಯ ಮಂತ್ರಿಗಳು ಮಾತನಾಡುತ್ತಿದ್ದಾರೆ.

ಶ್ರೀ ಆರಗ ಜ್ಞಾನೇಂದ್ರ : ಅವರನ್ನು ಅರೆಸ್ಟ್ ಮಾಡಿ, ಕೇಸ್ ರಿಜಿಸ್ಟರ್ ಮಾಡಿ, ಅಂತಹ ದೊಡ್ಡ ಅಪರಾಧಿಯನ್ನು ಕ್ಯಾಬಿನೆಟ್‌ನಲ್ಲಿ ಇಟ್ಟುಕೊಂಡಿದ್ದಕ್ಕೋಸ್ಕರ ಜನರ ಕ್ಷಮೆ ಕೇಳಿ, ಅದನ್ನಾದರೂ ನೀವು ಮಾಡಿ.

ಶ್ರೀ ಡಿ. ಬಿ. ಚಂದ್ರೇಗೌಡ : ಮಾನ್ಯ ಸಭಾಧ್ಯಕ್ಷರೆ, ಯಾರದ್ದಾದರೂ ಒಬ್ಬರದ್ದು ರೆಕಾರ್ಡ್‌ಗೆ ಹೋಗಲಿ.

ಅಧ್ಯಕ್ಷರು : ಮಾನ್ಯ ಮಂತ್ರಿಗಳು ಪೂರ್ತಿ ಮಾತನಾಡಲಿ, ಆಮೇಲೆ ನೀವು ಮಾತನಾಡಿ.

ಶ್ರೀ ಡಿ. ಬಿ. ಚಂದ್ರೇಗೌಡ : ಮಾನ್ಯ ಸಿಂಧ್ಯಾ ಅವರು ಬಹಳ ಸೀರಿಯಸ್ ಸಬ್ಜೆಕ್ಟ್ ರೈಸ್ ಮಾಡಿದ್ದಾರೆ. ಈ ಸಭೆ, ಸದನ ನಡೆಯದೇ ಇರುವುದಕ್ಕೆ ಕಾರಣ ಸರ್ಕಾರ ಎಂದು ಹೇಳಿದ್ದಾರೆ. ನೀವು ನಿಲುವಳಿ ಸೂಚನೆ ತಂದರೆ ತಾವು ಕ್ವೆಶ್ಚನ್ ಅವರನ್ನು ಸಸ್ಪೆಂಡ್ ಮಾಡಿ ವಿಷಯ ತೆಗೆದುಕೊಳ್ಳುವುದಕ್ಕೆ ನಮ್ಮದೇನೂ ಬಾಧಕವಿಲ್ಲ ಎಂದು ಹೇಳಿದ ಸರ್ಕಾರ, ಈ ಸರ್ಕಾರ ಸದನ ನಡೆಯುವುದಕ್ಕೆ ಬಿಡುವುದಿಲ್ಲ ಎನ್ನುವಂತಹ ಮಾತನ್ನು ನಾನು ಅವರ ಬಾಯಿಂದ ನಿರೀಕ್ಷೆ ಮಾಡಿರಲಿಲ್ಲ. ಈಗಲೂ ಈ ಮೊಮೆಂಟ್‌ನಲ್ಲೂ ತಯಾರಿದ್ದೇವೆ. ಆದರೆ ನೀವು ಹೇಳಿದ ಹಾಗೆ ಎಲ್ಲಾ ಉತ್ತರವನ್ನೂ, ನಾವು ಹೇಳಿದ ಹಾಗೆಯೇ ಉತ್ತರ ಹೇಳಿ ಎಂದು ಸರ್ಕಾರಕ್ಕೆ ಹೇಳಬಹುದಾ? ತಾವು ನಮಗೆ ಹೇಳಬೇಕು. ಹೇಳುವುದಕ್ಕೆ ಸಾಧ್ಯವೇ ಇಲ್ಲ.

ಅಧ್ಯಕ್ಷರು : ನನಗೇ ಪವರ್ಸ್ ಇಲ್ಲ. ನಿಮಗೆ ಇಷ್ಟ ಬಂದ ಹಾಗೆ ಉತ್ತರ ಕೊಡಿಸಬೇಕು ಎಂದರೆ ಹಾಗೆ ಅವರನ್ನು ನಾನು ಮಾಡುವುದಕ್ಕೆ I have no powers.

ಶ್ರೀ ಡಿ.ಬಿ. ಚಂದ್ರೇಗೌಡ : ಮಾನ್ಯ ಸೋಮಶೇಖರ್ ಅವರು ಹೇಳಿದರು.

ಶ್ರೀ ಸಿ.ಆರ್. ಸಗೀರ್ ಅಹಮದ್ : ಮಾನ್ಯ ಕಾನೂನು ಮಂತ್ರಿಗಳು ಏನು ಹೇಳುತ್ತಿದ್ದಾರೆಂದರೆ, ಈ ಕಾನೂನಿನ ಬಗ್ಗೆ ನಾನು ತಿಳಿದಷ್ಟು ವಿಚಾರವನ್ನು ಹೇಳುತ್ತಿದ್ದೇನೆ. ಮಾನ್ಯ

ಸುಬ್ಬಾರೆಡ್ಡಿಯವರು ನನಗಿಂತ ಹೆಚ್ಚು ಕಾನೂನನ್ನು ತಿಳಿದುಕೊಂಡಿರುವುದರಿಂದ ಇದರ ವಿಚಾರ ಹೇಳಿ ಎಂದು ಪದೇ ಪದೇ ಅವರನ್ನು ಕೇಳುತ್ತಿದ್ದಾರೆ.

(ಗೊಂದಲ)

ಶ್ರೀ ಎ. ರಾಮದಾಸ್ : ಮಾನ್ಯ ಚಂದ್ರೇಗೌಡರು ಕನ್ನಡದಲ್ಲಿ ಹೇಳಿದ್ದನ್ನು ಮಾನ್ಯ ಸಗೀರ್ ಅಹಮದ್ ಅವರು ಕನ್ನಡದಲ್ಲಿ ಟ್ರಾನ್ಸ್‌ಲೇಟ್ ಮಾಡುತ್ತಿದ್ದಾರೆ.

ಶ್ರೀ ಆರಗ ಜ್ಞಾನೇಂದ್ರ : ಇಬ್ಬರೂ ಒಂದೇ ಜಿಲ್ಲೆಯವರು ನೋಡಿ.

ಶ್ರೀ ಡಿ. ಬಿ. ಚಂದ್ರೇಗೌಡ : ಇವರು ಧರಣಿ ಮಾಡುತ್ತಿದ್ದಾರೆ. ಸರ್ಕಾರ ನಿರಾಸಕ್ತವಾಗಿದೆ ಎಂದು ಹೇಳುತ್ತಿದ್ದಾರೆ. ಇದು ಏನು ಸ್ವಾಮಿ? ಎರಡು ಗಂಟೆಗಳ ಕಾಲ ಉತ್ತರ ಹೇಳಿದ್ದಾರೆ.

ಶ್ರೀ ಸಿ. ಆರ್. ಸಗೀರ್ ಅಹಮದ್ : ಮೂರು ದಿನಗಳಿಂದ ಹೇಳಿದ್ದಾರೆ.

ಶ್ರೀ ಡಿ. ಬಿ. ಚಂದ್ರೇಗೌಡ : ಬಹುಶಃ ಎಲ್ಲರಿಗೂ ಸಮಾಧಾನ ಒಳಗೆ ಆಗಿದೆ. ಆದರೆ ಇಲ್ಲಿ ಒಳಕ್ಕೆ ಬಂದು ರಾಜಕಾರಣ ಮಾಡುವುದು ಇದೆಯಲ್ಲಾ, ಇದು ಈ ವರ್ಷ ಚುನಾವಣೆಯ ವರ್ಷ, ಎಂದು ಅದೂ ನಮಗೆ ಅರ್ಥವಾಗುತ್ತದೆ.

(ಗೊಂದಲ)

ಶ್ರೀ ಡಿ. ಬಿ. ಚಂದ್ರೇಗೌಡ : ಆದರೆ ನಾನೇನು ಹೇಳುತ್ತಿದ್ದೇನೆಂದರೆ ಈ ಸದನವನ್ನು ಸಮರ್ಥವಾಗಿ ಬಳಸಿಕೊಳ್ಳಬೇಕು. ನಾನೇನು ಹೇಳುತ್ತಿದ್ದೆ, ಸಮಾಧಾನ ಆಗಿದೆ. ನಮ್ಮ ಮಾನ್ಯ ಗೃಹ ಮಂತ್ರಿಗಳ ಉತ್ತರದಿಂದ ಸಮಾಧಾನ ಆಗಿದೆ. ಆದರೆ ಇವರಿಗೆ ಚುನಾವಣೆ ವರ್ಷ, ದಯಮಾಡಿ ನಮ್ಮನ್ನು ಕ್ಷಮಿಸಿ ಎಂದು ಕಿವಿಯಲ್ಲಿ ಹೇಳುವವರೂ ಇದ್ದಾರೆ. ನಾನು ಅವರ ವಿಚಾರ ಹೇಳುವುದಿಲ್ಲ. ಆದರೆ ನಾವೆಲ್ಲರೂ ಈ ಸದನವನ್ನು ಸಮರ್ಥವಾಗಿ ಬಳಸಿಕೊಳ್ಳೋಣ, ಮಾನ್ಯ ಶ್ರೀನಿವಾಸಗೌಡರು ಹೇಳಿದರು, ಬರ, ಕುಡಿಯುವ ನೀರು, ಕರೆಂಟ್, ಸಮಸ್ಯೆ ಇದೆ, ರಾಜ್ಯಪಾಲರ ಭಾಷಣದ ಮೇಲೆ ಮಾತನಾಡಬೇಕು ಎಂದು ಇಷ್ಟೆಲ್ಲಾ ಪ್ರಶ್ನೆ ಇರತಕ್ಕ ಜನ ಚರ್ಚೆ ಮುಂದುವರಿಸುವುದಕ್ಕೆ ಏಕೆ ಅಡ್ಡಿ ಮಾಡಬೇಕು?

ಶ್ರೀ ಕೆ. ಎಂ. ಕೃಷ್ಣಮೂರ್ತಿ : ಸತ್ಯ ಹೇಳಿ ಸ್ವಾಮಿ, ಬಹಳ ಹೊತ್ತು ಇಲ್ಲ. ಸಭೆಗೆ ಸತ್ಯವನ್ನು ಹೇಳಿದರೆ ಇಡೀ ರಾಜ್ಯದ ಜನತೆಗೆ ಗೊತ್ತಾಗುತ್ತದೆ.

ಶ್ರೀ ಡಿ. ಬಿ. ಚಂದ್ರೇಗೌಡ : ಕೃಷ್ಣಮೂರ್ತಿಯವರೂ ಇನ್‌ವಾಲ್ವ್ ಆಗಿದ್ದಾರೆ ಎಂದು ಹೇಳಲಾ?

ಶ್ರೀ ಕೆ. ಎಂ. ಕೃಷ್ಣಮೂರ್ತಿ : ಹೇಳಿ, ಕೃಷ್ಣಮೂರ್ತಿಯವರೂ ಇನ್‌ವಾಲ್ವ್ ಆಗಿದ್ದರೆ ಆಗಲಿ. ಸತ್ಯ ಹೇಳಿ, ಬರೇ ಹರಿಕಥೆ ಹೇಳಿಕೊಂಡು ಕುಳಿತುಕೊಳ್ಳುತ್ತೀರಾ?

ಶ್ರೀ ಡಿ. ಬಿ. ಚಂದ್ರೇಗೌಡ : ನಾನು ಹೇಳುವುದು ಇಷ್ಟೇ. ಯಾರು ಅಪರಾಧ ಮಾಡಿದ್ದಾರೋ...

ಶ್ರೀ ಕೆ. ಎಂ. ಕೃಷ್ಣಮೂರ್ತಿ : ಕೇಶುಭಾಯಿ ದಾಸರು ಹರಿಕಥೆ ಹೇಳಿದ ಹಾಗೆ ಆಗುತ್ತದೆ.

ಶ್ರೀ ಡಿ. ಬಿ. ಚಂದ್ರೇಗೌಡ : ಯಾರು ಅಪರಾಧ ಮಾಡಿದ್ದಾರೋ ಅವರಿಗೆ ಯಾವುದೇ ಸಹಕಾರ ಸಿಕ್ಕುವುದಿಲ್ಲ, ಆದ್ದರಿಂದ ದಯಮಾಡಿ ನಾನು ಅವರು ಏನು ಹೇಳಿದ್ದಾರೆ ಇದನ್ನು, ರೆಕಾರ್ಡ್‌ಗೆ ಹೋಗಿರುವ ಕಾರಣಕ್ಕೆ ನಾನು ಹೇಳಿದೆ. ಸರ್ಕಾರ ಯಾವುದನ್ನೂ ಮುಚ್ಚಿಟ್ಟಿಲ್ಲ, ಯಾರನ್ನೂ ರಕ್ಷಣೆ ಮಾಡುವುದಿಲ್ಲ, ಯಾರನ್ನೂ ಕಾನೂನು ಬಾಹಿರವಾಗಿ ಅರೆಸ್ಟ್ ಮಾಡುವುದಕ್ಕೂ ಹೋಗುವುದಿಲ್ಲ.

ಅವರ ಆಸ್ತಿ ಮಟ್ಟ ಹಾಕಿಕೊಳ್ಳುವುದಕ್ಕೂ ಹೋಗುವುದಿಲ್ಲ. ಕಾನೂನಿನ ಚೌಕಟ್ಟಿನಲ್ಲಿ ಏನು ನಡೆಯಬೇಕೋ ಅದು ನಡೆಯುತ್ತದೆ.

ಶ್ರೀ ಜಗದೀಶ್ ಶೆಟ್ಟರ್ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೆ, ಮಾನ್ಯ ಚಂದ್ರೇಗೌಡರು ಇವತ್ತು ನಾವು ಸದನ ನಡೆಸುವುದಕ್ಕೆ ತಯಾರಿದ್ದೇವೆ, ಪ್ರತಿಪಕ್ಷದವರು ಸದನಕ್ಕೆ ಬ್ರೇಕ್ ಹಾಕುತ್ತಿದ್ದಾರೇನೋ ಎನ್ನುವ ರೀತಿಯಲ್ಲಿ ಮಾತನಾಡುತ್ತಿದ್ದಾರೆ. ನಿಜವಾಗಿ ಸರ್ಕಾರಕ್ಕೆ ಸದನ ನಡೆಸುವಂತಹ ಮನಸ್ಸು ಇಲ್ಲ. ಏಕೆಂದರೆ ಬಹಳಷ್ಟು ಪ್ರಕ್ಷುಬ್ಧವಾದಂತಹ ವಿಷಯಗಳು ಇದ್ದಾವೆ. ಅದರ ಬಗ್ಗೆ ಚರ್ಚೆ ಮಾಡುವುದಕ್ಕೆ ನಮಗೆ ಮನಸ್ಸು ಇದೆ. ಆದರೆ

ಅಧ್ಯಕ್ಷರು : ಚರ್ಚೆ ನಡೆಸಿ ಎಂದು ಹೇಳುತ್ತಿದ್ದಾರಲ್ಲಾ..

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಚಂದ್ರೇಗೌಡರಿಗೆ ಈ ಸದನ ನಡೆಸಬೇಕು ಎಂದು ನಿಜವಾಗಿಯೂ ಕಳಕಳಿ ಇದೆಯಾ? ಇವತ್ತು ಮಾನ್ಯ ಗೃಹ ಮಂತ್ರಿಗಳು ಉತ್ತರ ಏನು ಕೊಟ್ಟರು ಅದು ಸಮಾಧಾನ ಆಗಿದೆ ಎಂದು ಹೇಳಿಬಿಟ್ಟರು. ನಾವು ಕೆಲವೊಂದು ವಿಷಯಗಳ ಬಗ್ಗೆ ಸ್ಪಷ್ಟೀಕರಣವನ್ನೂ ಕೇಳಿದೆವು. ಅದಕ್ಕೆ ಇದುವರೆವಿಗೂ ಉತ್ತರ ಇಲ್ಲ. ಈಗ ಕೆಲವು ಕ್ಷಣದ ಹಿಂದೆ ನಾನು ಕೇಳಿದೆ. ಎರಡೇ ಉತ್ತರವನ್ನು ಅವರು ಕೊಟ್ಟು ಬಿಡಲಿ. ಇವತ್ತು ಮಾನ್ಯ ರೋಷನ್ ಬೇಗ್ ಅವರೇನು ಮೆಕ್ಕಾಗೆ ಹೋಗಿದ್ದಾರಲ್ಲಾ, ಅವರನ್ನು ಇವತ್ತು ಮೆಕ್ಕಾಗೆ ಏಕೆ ಕಳುಹಿಸಿದಿರಿ? ಇದಕ್ಕೆ ಉತ್ತರ ಕೊಡಲಿ. ಮೆಕ್ಕಾಗೆ ಏಕೆ ಹೋದರು ಎಂಬುದಕ್ಕೆ ಅವರು ಉತ್ತರ ಕೊಡಲಿ.

ಶ್ರೀ ಬಿ. ಸೋಮಶೇಖರ್ : ಅವರ ಮೇಲೆ ಏನಾದರೂ ಆರೋಪಗಳು ಇದ್ದರೆ ಅವರು ಇಲ್ಲೇ ಇರಬೇಕಾಗುತ್ತದೆ.

ಶ್ರೀ ಜಗದೀಶ್ ಶೆಟ್ಟರ್ : ಕರೀಂ ಲಾಲಾ ಅಜ್ಮೀರ್‌ಗೆ ಹೋಗಿದ್ದ.

(ಗೊಂದಲ)

ಶ್ರೀ ಸಿ.ಆರ್. ಸಗೀರ್ ಅಹಮದ್ : ಮಾನ್ಯ ಅಧ್ಯಕ್ಷರೆ, ಇದು ಬಹಳ ಅತಿ ಆಯಿತು. ಏಕೆ ಅಂದರೆ....

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್ : ನಾನು ಮಾತನಾಡುತ್ತಿದ್ದೇನೆ. ನಾನು ಯೀಲ್ಡ್ ಆಗಿಲ್ಲ. ನಾನು ಮುಗಿಸುತ್ತೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಹೌಸ್ ಒಂದು ಕಡೆ ಡಿಸ್ ಆರ್ಡರ್ ಇದೆ, ಇನ್ನೊಂದು ಕಡೆ ಅವರು ಹೋಗಿ ಮಾತನಾಡುತ್ತಿದ್ದಾರೆ.

ಶ್ರೀ ಜಗದೀಶ್ ಶೆಟ್ಟರ್ : ನಾನು ಮಾತನಾಡಿದ ಮೇಲೆ ಮಾನ್ಯ ಗೃಹ ಸಚಿವರು ಏನು ಬೇಕಾದರೂ ಮಾತನಾಡಲಿ. ನಮ್ಮದೇನೂ ತಕರಾರು ಇಲ್ಲ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ನಮಗೇನೂ ಬೇಕಾಗಿದ್ದಿಲ್ಲ, ನಿಮಗೆ ಬೇಕಾಗಿತ್ತು ಮಾತನಾಡಿ.

ಅಧ್ಯಕ್ಷರು : ಆಯಿತು ಸ್ವಾಮಿ, ಎಲ್ಲಾ ವಿಷಯ ಹೇಳಿದ್ದೀರಲ್ಲ.

ಶ್ರೀ ಜಗದೀಶ್ ಶೆಟ್ಟರ್ : ಸನ್ಮಾನ್ಯ ಅಧ್ಯಕ್ಷರೆ, ಕರೀಂಲಾಲಾನೂ ಅಜ್ಮೀರ್ ದರ್ಗಾಕ್ಕೆ ಹೋಗಿದ್ದ, ಆವಾಗ ಅರೆಸ್ಟ್ ಆದರು. ಇವತ್ತು ಮಾನ್ಯ ರೋಷನ್ ಬೇಗ್ ಅವರು ಮೆಕ್ಕಾಗೆ ಹೋಗಿದ್ದಾರೆ. ಅಲ್ಲಿಗೆ ಹೋಗಿ ಕರೆದುಕೊಂಡು ಬನ್ನಿ. ಇವತ್ತು ಅಸಹಾಯಕತನವನ್ನು ಪ್ರದರ್ಶನ ಮಾಡುತ್ತಿದ್ದಾರೆ.

ಇವತ್ತು ಸ್ಟ್ಯಾಂಪೇಟ್ ಇನ್ನೂ ಜೀವಂತ ಇದೆ. ಸಿಬಿಐಗೆ ಹ್ಯಾಂಡ್‌ಓವರ್ ಮಾಡಿ ನೋಟಿಫಿಕೇಶನ್ ಇಶ್ಯೂ ಮಾಡಿದರು. ಇನ್ನೂ ಬಂಧು ಛಾರ್ಜ್ ತೆಗೆದುಕೊಂಡಿಲ್ಲ. ಆದರೆ ಇನ್ನೂ ಜೀವಂತ ಇದೆ. ಇವರಿಗೇನೋ ನಾವು ಕೇಸ್ ಮಾಡುವುದಕ್ಕೆ ಬರುವುದಿಲ್ಲ, ಕೇಸ್ ಹಾಕುವುದಕ್ಕೆ ಆಗುವುದಿಲ್ಲ ಅನ್ನುವಂತಹ ಮಾತನ್ನು ಹೇಳುತ್ತಿದ್ದಾರೆ.

ಅಧ್ಯಕ್ಷರು : ನೀವು ಹೇಳಿದ್ದು ನೀವು ಹೇಳುತ್ತಿದ್ದೀರಿ, ಅವರು ಹೇಳಿದ್ದು ಅವರು ಹೇಳುತ್ತಿದ್ದಾರೆ. ಏನೂ ಬೇರೆ ನಡೆಯುತ್ತಿಲ್ಲ.

ಶ್ರೀ ಜಗದೀಶ್ ಶೆಟ್ಟರ್ : ಅಸಹಾಯಕತೆಯನ್ನು ಪ್ರದರ್ಶನ ಮಾಡುತ್ತಿದ್ದರೆ. ಇವತ್ತು ಹಾಗಾದರೆ ಹೇಳಿ ಬಿಡಲಿ. ಕಳೆದ ಸದನದಲ್ಲಿ ಸಾಂಗ್ಲಿಯಾನಾ ಅವರ ಪತ್ರಿಕಾ ಹೇಳಿಕೆಯನ್ನು ತೆಗೆದುಕೊಂಡು ನಾವು ಮಾತನಾಡುವುದಕ್ಕೆ ಹೋದರೆ ಆ ರೋಷನ್ ಬೇಗ್ ಅವರ ಹೆಸರು ಬಂದರೆ ಆಗಲೇ ಎಲ್ಲರೂ ಎದ್ದು ನಿಂತು ಬಿಟ್ಟರು. ರೋಷನ್ ಬೇಗ್ ನಿರಪರಾಧಿ, ಅವರೇನೂ ಅಪರಾಧ ಮಾಡಿಲ್ಲ. ಮಂತ್ರಿಗಳ ಮೇಲೆ ನೀವು ಹೀಗೆಲ್ಲಾ ಅಲಿಗೇಷನ್ ಮಾಡಬಾರದು ಎನ್ನುವಂತಹ ಮಾತನ್ನು ಹೇಳಿದರು. ಆದರೆ ಇವತ್ತು ರೋಷನ್ ಬೇಗ್ ಅವರು ಅಪರಾಧಿ ಸ್ಥಾನದಲ್ಲಿ ನಿಂತಿದ್ದಾರೆ, ಈಗ ಅವರ ಮೇಲೆ ಕ್ರಿಮಿನಲ್ ಕೇಸ್ ಹಾಕಿ ಎಂದರೆ ಇಲ್ಲ ನಾವು ಕೇಸ್ ಹಾಕುವುದಿಲ್ಲ ಎಂದು ಹೇಳುತ್ತಾರೆ. ಹಾಗಾದರೆ ನಿಮ್ಮ ಬಾಯಿಂದ ಬರಲಿ. ರೋಷನ್ ಬೇಗ್ ನಿರಪರಾಧಿ, ಆತ ಯಾವುದೇ ಒಂದು ಅಪರಾಧ ಮಾಡಿಲ್ಲ. ಆ ಕರೀಂಲಾಲಾನ ಜೊತೆ ಏನೂ ಸಂಬಂಧ ಇಲ್ಲ ಎನ್ನುವಂತಹ ಮಾತಾದರೂ ನಿಮ್ಮ ಬಾಯಿಂದ ಬಂದು ಬಿಡಲಿ. ಆದಾದರೂ ರೆಕಾರ್ಡ್ ಆಗಲಿ ಒಂದು ಸಲ.

Mr. Speaker : No, I cannot compel a minister to reply like this.

ಶ್ರೀ ಜಗದೀಶ್ ಶೆಟ್ಟರ್ : ಅದನ್ನೂ ನೀವು ಹೇಳುವುದಕ್ಕೆ ತಯಾರಿಲ್ಲ.

ಅಧ್ಯಕ್ಷರು : ನೀವು ಹೇಳಿದ್ದನ್ನೇ ಹೇಳುತ್ತಿದ್ದೀರಿ. ನಾನು ಅವರನ್ನು ಬಲವಂತ ಮಾಡಲಿ ಎಂದು ಭಾವಿಸುತ್ತೀರಿ. ಅವರನ್ನು ಬಲವಂತ ಮಾಡಲು ನನಗೆ ಪವರ್ಸ್ ಇಲ್ಲ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್ : ನಾವು ವಿಚಾರಣೆ ಮಾಡುತ್ತೇವೆ, ಆತನ ಮೇಲೆ ಕ್ರಿಮಿನಲ್ ಕೇಸ್ ಹಾಕುತ್ತೇವೆ ಎಂದು ಇದನ್ನೂ ನೀವು ಹೇಳುವುದಕ್ಕೆ ತಯಾರು ಇಲ್ಲ.

(ಗೊಂದಲ)

ಅಧ್ಯಕ್ಷರು : ಎಷ್ಟು ಸಲ ಮಾತನಾಡುವುದು? ಹೇಳಿದ್ದನ್ನೇ ಹೇಳುತ್ತಿದ್ದೀರಲ್ಲಾ.

ಶ್ರೀ ಜಗದೀಶ್ ಶೆಟ್ಟರ್ : ರೋಷನ್ ಬೇಗ್ ಅವರು ನಿರಪರಾಧಿ ಎಂದು ಹೇಳುವುದಕ್ಕೂ ತಯಾರಿಲ್ಲ.

(ಗೊಂದಲ)

ಅಧ್ಯಕ್ಷರು : ಮಾನ್ಯ ಸೋಮಶೇಖರ್, ಹೇಳಿದ್ದನ್ನೇ ಹೇಳುತ್ತಿದ್ದಾರೆ. ಎಲ್ಲರೂ ಆಡಳಿತದ ಮೇಲೆಯೇ ಹೇಳುತ್ತಿದ್ದೀರಿ. ಹೇಳಿದ್ದನ್ನೇ ಹೇಳುತ್ತಿದ್ದೀರಿ. ಆಯಿತು ಇದು ಸಾಕು.

ಶ್ರೀ ಜಗದೀಶ್ ಶೆಟ್ಟರ್ : ಸಾಕಷ್ಟು ವಿಷಯಗಳು ಇವೆ. ಕುಡಿಯುವ ನೀರಿನ ಸಮಸ್ಯೆ ಇದೆ, ರೈತರ ಸಮಸ್ಯೆ ಇದೆ. ಬರಗಾಲದ ಸಮಸ್ಯೆ ಇದೆ. ರೈತರು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ.

ಅಧ್ಯಕ್ಷರು: ತಾವು ಅಲೋ ಮಾಡಿ. ತಾವು ದಯವಿಟ್ಟು ತಮ್ಮ ಸ್ವಸ್ಥಾನಗಳಿಗೆ ಹೋಗಿ. ಇವತ್ತಿನಿಂದ ಪ್ರಶ್ನೋತ್ತರ ವೇಳೆ ಶುರು ಮಾಡೋಣ. ತಾವೆಲ್ಲಾ ತಮ್ಮ ತಮ್ಮ ಸ್ಥಾನಗಳಿಗೆ ಹೋಗಿ.

ನಾನು ರಿಕ್ವೆಸ್ಟ್ ಮಾಡಿಕೊಳ್ಳುತ್ತಿದ್ದೇನೆ. ನಿಮ್ಮ ನಿಮ್ಮ ಸ್ಥಾನಗಳಿಗೆ ಹೋಗದೇನೇ ನೀವು ಏನೇನೋ ಮಾತನಾಡಿದರೆ ಹೇಗೆ?

ಶ್ರೀ ಜಗದೀಶ್ ಶೆಟ್ಟರ್ : ನಾನೇನು ಹೇಳುತ್ತಿದ್ದೇನೆಂದರೆ ಸರ್ಕಾರ ವಿನಾಕಾರಣ ಮೊಂಡುತನ ಮಾಡುತ್ತಿದೆ. ಮೊಂಡುತನ ಮಾಡಿ ಇಲ್ಲಿ ಯಾವುದೂ ಕಾರ್ಯಕಲಾಪ ನಡೆಯಬಾರದು. ಯಾವುದೇ ಒಂದು ಪ್ರಜ್ವಲಿತ ಸಮಸ್ಯೆಗಳು ಇಲ್ಲಿ ಚರ್ಚೆಗೆ ಬರಬಾರದು ಎನ್ನುವಂತಹ ದುರುದ್ದೇಶದಿಂದ ಮೊಂಡುತನವನ್ನು ಮಾಡಿ ಈ ಸದನವನ್ನು ನಡೆಸಲು ಬಿಡುತ್ತಾ ಇಲ್ಲ.

ಅಧ್ಯಕ್ಷರು : ಅವರೇ ಹೇಳುತ್ತಿದ್ದಾರೆ. ಪ್ರಾರಂಭ ಮಾಡಿ ಎಂದು ಹೇಳುತ್ತಿದ್ದಾರಲ್ಲಾ.

ಶ್ರೀ ಜಗದೀಶ್ ಶೆಟ್ಟರ್ : ಈ ಸದನವನ್ನು ನಡೆಸುವುದಕ್ಕೆ ಬಿಡುತ್ತಾ ಇಲ್ಲ.

1.30 ಪಿಎಂ

ಅಧ್ಯಕ್ಷರು : ಅವರು ಪ್ರಾರಂಭ ಮಾಡಿ ಎಂದು ಹೇಳುತ್ತಿದ್ದಾರೆ, ನಾನು ಹೇಳುತ್ತಿದ್ದೇನೆ, ಸರ್ಕಾರದವರು ಹೇಳುತ್ತಿದ್ದಾರೆ, ರೂಲಿಂಗ್ ಪಾರ್ಟಿಯವರು ಹೇಳುತ್ತಿದ್ದಾರೆ, ನೀವು ಏನು ಮಾಡುತ್ತೀರಿ?

(ಗೊಂದಲ)

ಶ್ರೀ ಬಿ. ಸೋಮಶೇಖರ್ : ಮಾನ್ಯ ಅಧ್ಯಕ್ಷರೆ, ಒಂದು ಪಾಯಿಂಟ್,...

ಅಧ್ಯಕ್ಷರು : ಅವರು ಮಾತನಾಡಲಿ, ಎಷ್ಟು ಪಾಯಿಂಟ್ ಮಾತನಾಡಿದರೂ ಅದೇನು ಆಗುತ್ತಿಲ್ಲ.

ಶ್ರೀ ಬಿ. ಸೋಮಶೇಖರ್ : ಮಾನ್ಯ ಅಧ್ಯಕ್ಷರೆ, ನನ್ನದು ಒಂದು ಪಾಯಿಂಟ್ ಇದೆ ಅದನ್ನು ಕೇಳಿದ ಮೇಲೆ ಗೃಹಮಂತ್ರಿಗಳು ಉತ್ತರ ಕೊಡಲಿ. ಈಗ ಈ ಒಂದು ವಿಶೇಷವಾದಂತಹ ಸನ್ನಿವೇಶದಲ್ಲಿ ಈ ವಿಷಯ ಪ್ರಸ್ತಾಪವಾಯಿತು. ಯಾವ ವಿಚಾರ ಪ್ರಸ್ತಾಪವಾಯಿತು. ಈ ಸದನದಲ್ಲಿ, ಅದಕ್ಕೆ ಯಾವ ರೀತಿ ಉತ್ತರ ಕೊಟ್ಟಿದ್ದಾರೆ ಎಂಬುದನ್ನು ನೋಡಿ ಹಾಗೂ ನಮ್ಮ ಪ್ರಶ್ನೆ ಏನೆಂದರೆ ಸಾಧಾರಣ ಸನ್ನಿವೇಶದಲ್ಲಿ ಸಚಿವರು ರಾಜೀನಾಮೆ ಕೊಟ್ಟಿದ್ದರೆ, ತಾವು ಹೇಳಿದ ಹಾಗೆ ಯಾರು ರಾಜೀನಾಮೆ ಕೊಟ್ಟರು ಅವರು ಉತ್ತರ ಹೇಳಬಹುದಾಗಿತ್ತು.

ಶ್ರೀ ಡಿ. ಬಿ. ಚಂದ್ರೇಗೌಡ : ವಿಶೇಷ ಪರಿಸ್ಥಿತಿ ಏನೂ ಇಲ್ಲ.

ಶ್ರೀ ಬಿ. ಸೋಮಶೇಖರ್ : ನಾನು ಯಾವುದು ಎಂದು ಹೇಳುತ್ತೇನೆ.

ಅಧ್ಯಕ್ಷರು : ಈ ಪಾಯಿಂಟ್ ಅನ್ನು ನೀವು 2–3 ದಿವಸದಿಂದ ಹೇಳುತ್ತಲೇ ಇದ್ದೀರಿ. ನೀವು ಹೊಸದಾಗಿ ಹೇಳುತ್ತಿಲ್ಲ. ಹೇಳಿದ್ದನ್ನೇ ಹೇಳುತ್ತಿದ್ದೀರಿ, ಆಯಿತಾ?

(ಗೊಂದಲ)

ಶ್ರೀ ಬಿ. ಸೋಮಶೇಖರ್ : ನಮ್ಮ ಪ್ರಶ್ನೆ ಏನೆಂದರೆ, ಮಾನ್ಯ ರೋಷನ್‌ಬೇಗ್ ಅವರು ವಿದೇಶಕ್ಕೆ ಹೋಗಬೇಕಾದರೆ ಮಂತ್ರಿಯಾಗಿದ್ದರು, ಅದಕ್ಕೆ ಪರ್ಮಿಷನ್ ಕೇಳಬೇಕಾದರೆ, ಅವರಿಗೆ ವೀಸಾ ಸಿಗುವಾಗ as a Minister, he has applied for a visa at the Central Government. ರಾಜ್ಯ ಸರ್ಕಾರದ ಕಡೆಯಿಂದ ಪರ್ಮಿಷನ್ ಕೊಡುವಾಗ ಅದಕ್ಕೆ ಮಾನ್ಯ ಮುಖ್ಯಮಂತ್ರಿಗಳು ಪರ್ಮಿಷನ್ ಕೊಡುತ್ತಾರೆ. ಪರ್ಮಿಷನ್ ಅನ್ನು ತಾವು ಮಂತ್ರಿಯಾಗಿ ಕೊಟ್ಟು, ಈಗ ರಾಜೀನಾಮೆ ತೆಗೆದುಕೊಂಡಿದ್ದಾರೆ....

ಅಧ್ಯಕ್ಷರು : ನೋಡಿ ಸಿಂಧ್ಯರವರು ಹೇಳಿದ್ದಾರೆ, ತಾವು ಅದನ್ನು ಹೇಳಿದ್ದೀರಿ.

(ಗೊಂದಲ)

ಶ್ರೀ ಬಿ. ಸೋಮಶೇಖರ್ : ನಿಮ್ಮ ಸರ್ಕಾರದ ಜವಾಬ್ದಾರಿ ಇದೆ. ಅವರು ಯಾವ ಉದ್ದೇಶಕ್ಕೋಸ್ಕರ ರಾಜೀನಾಮೆ ಕೊಟ್ಟರು? ಅವರಿಗೆ ಪರ್ಮಿಷನ್ ಏಕೆ ಕೊಟ್ಟಿರಿ? ಅದಕ್ಕೆ ತಾವು ಉತ್ತರ ಕೊಡಬೇಕು.

(ಗೊಂದಲ)

ಅಧ್ಯಕ್ಷರು : ನೋಡಿ ನಿಮ್ಮ ನಾಯಕರು ಮಾತನಾಡುವಾಗ ಅವರು ಕೂಗುತ್ತಿದ್ದರಾ? ಮಾನ್ಯ ಪೂಜಾರ್‌ರವರೇ ದಯವಿಟ್ಟು ಬೇಡ. ನಿಮ್ಮ ನಾಯಕರು ಮಾತನಾಡುವಾಗ ಸುಮ್ಮನೆ ಇದ್ದು, ಆಯಿತು ಸೋಮಶೇಖರ್ ಅವರೇ, ದಯವಿಟ್ಟು ತಾವು ಕುಳಿತುಕೊಳ್ಳಿ. ನೀವು ದಯವಿಟ್ಟು ಇಲ್ಲಿ ಕೇಳಿ, ಶೆಟ್ಟರ್‌ರವರೇ, ತಾವು ತಮ್ಮ ಸದಸ್ಯರಿಗೆ ಹೇಳಿ. I have permitted the Minister Mr. Kharge to speak.

(ಗೊಂದಲ)

ಅಧ್ಯಕ್ಷರು : ದಯವಿಟ್ಟು ಚಿಕ್ಕನ ಗೌಡರೇ, ಕುಳಿತುಕೊಳ್ಳಿ. ಏನು ಇದೆಲ್ಲಾ? ನಿಮ್ಮ ನಾಯಕರು ಮಾತನಾಡುವಾಗ ಅವರು ಯಾರಾದರೂ ಮಾತನಾಡಿದರಾ? ಗಲಾಟೆ ಮಾಡಿದರಾ? ಏಕೆ ಹೀಗೆ ಮಾತನಾಡುತ್ತೀರಿ? No, I am very sorry for this kind of attitude. ನಿಮ್ಮ ನಾಯಕರು ಮಾತನಾಡುವಾಗ ಸುಮ್ಮನೆ ಇದ್ದು, ಅವರ ನಾಯಕರು ಮಾತನಾಡುವಾಗ ನೀವು ಏಕೆ ಈ ರೀತಿ ಮಾಡುತ್ತೀರಿ? ಮಾನ್ಯ ಅಶೋಕ್‌ರವರೇ ಬೇಡ, ಈ ರೀತಿ ಮಾಡಬೇಡಿ. ಈ ರೀತಿ ಮಾತಾಡುತ್ತಾ ಹೋದರೆ ಹೇಗೆ? ಶೆಟ್ಟರ್‌ರವರೇ, ನಿಮ್ಮ ಸದಸ್ಯರಿಗೆ ಹೇಳಿ.

ಶ್ರೀ ಸಿ. ಆರ್. ಸಗೀರ್ ಅಹಮದ್ : ಶವಪೆಟ್ಟಿಗೆಯಲ್ಲಿ ದುಡ್ಡು ಹೊಡೆದವರು ತೊಲಗಲಿ.

(ಗೊಂದಲ)

Mr. Speaker : No. I don't allow this kind of unnecessary talk. Please, I am requesting you.

†ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಸಚಿವರು) : ಸನ್ಮಾನ್ಯ ಅಧ್ಯಕ್ಷರೆ, ಈಗ ಅವರು ಹೇಳಿದ್ದನ್ನು ನಾವು ಸಮಾಧಾನವಾಗಿ ಕೇಳಿದ್ದೇವೆ. ಇಲ್ಲಿ ಧರಣಿ ಮಾಡುತ್ತಾರೆ ಮತ್ತು ಅವರು ಅಲ್ಲಿ ಅವರ ಸ್ಥಳಕ್ಕೆ ಹೋಗಿ ಏನು ಮಾತನಾಡಿದರೂ ಆ ಮಾತು ಕೇಳಿದ್ದೇವೆ. ಆದರೆ ನಾವು ಮಾತನಾಡುವಾಗ ಅವರೂ ಕೂಡ ಕೇಳುವಂತಹ ಸೌಜನ್ಯತೆ ಇರಬೇಕು ಎನ್ನುವುದು ನಮ್ಮೆಲ್ಲರ ಅಪೇಕ್ಷೆ. ಈಗ ಒಂದು ಮಾತು ಹೇಳಿದರು ರೋಷನ್ ಬೇಗ್ ಹಜ್‌ಗೆ ಹೋಗಿದ್ದಾರೆ, ಮೆಕ್ಕಾಗೆ ಹೋಗಿದ್ದಾರೆ ಓಡಿ ಹೋದರು ಇಂತಹ ಮಾತುಗಳನ್ನು ಯಾರೂ ಹೇಳಬಾರದು. ಏಕೆಂದರೆ ಮೆಕ್ಕಾಗೆ ಹೋಗುವಂತಹ ಹಕ್ಕು, ಅಧಿಕಾರ ಪ್ರತಿಯೊಬ್ಬ ವ್ಯಕ್ತಿಗೂ ಕೂಡ ಇದೆ. ಸಂವಿಧಾನದಲ್ಲಿ ಪ್ರತಿಯೊಬ್ಬ ವ್ಯಕ್ತಿಗೂ ಕೂಡ ತಮ್ಮ ತಮ್ಮ ಧರ್ಮದ ಪ್ರಕಾರ ನಡೆದುಕೊಳ್ಳುವುದಕ್ಕೆ ಅಧಿಕಾರ ಇದೆ ಹಾಗೂ ಹಕ್ಕಿದೆ. ಆ ಹಕ್ಕನ್ನು ಯಾರೂ ಕೂಡ ಮೊಟಕುಗೊಳಿಸುವುದಕ್ಕೆ ಆಗುವುದಿಲ್ಲ. ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲ. ಸಂವಿಧಾನಬದ್ಧವಾಗಿ ಕೊಟ್ಟಂತಹ ಫಂಡಮೆಂಟಲ್ ರೈಟ್ಸ್. ರಿಲಿಜಿಯನ್‌ನಲ್ಲಿ ಅವರವರ ಧರ್ಮದ ಪ್ರಕಾರ ಯಾವರೀತಿ ನಡೆದುಕೊಳ್ಳಬೇಕೆನ್ನುವುದಕ್ಕೆ ಸಂಪೂರ್ಣವಾದಂತಹ ಹಕ್ಕು ಅನ್ನು ಸಂವಿಧಾನದಲ್ಲಿ ಈ ದೇಶದ ಜನ ಕೊಟ್ಟಿದ್ದಾರೆ. ಮತ್ತು ಪವಿತ್ರವಾದಂತಹ ನಮ್ಮ ಸಂವಿಧಾನದಲ್ಲಿ ಕೂಡ ಇದರ ಬಗ್ಗೆ ನಮಗೆ

ರಕ್ಷಣೆಯನ್ನು ಮಾಡತಕ್ಕಂಥ ಕಲಂಗಳು ಕೂಡ ಇದೆ. ಆ ಒಂದು ಹಕ್ಕನ್ನು ನಾವು ಮೊಟಕುಗೊಳಿಸುವುದಕ್ಕಾಗುವುದಿಲ್ಲ. ಇವತ್ತು ಅವರು ಮೆಕ್ಕಾಗೆ ಹೋಗಿದ್ದಾರೆ. ಅವರು ತಮ್ಮ ಧರ್ಮ ಸ್ಥಳಕ್ಕೆ ಹೋಗಿ ಭೇಟಿ ನೀಡತಕ್ಕಂಥ ಕೆಲಸ ಮಾಡಿದ್ದಾರೆ. ಅವರನ್ನು ಏಕೆ ಹೋಗಿದ್ದೀರಿ ಎಂದು ಕೇಳುವುದಕ್ಕೆ ನಮಗೆ ಹಕ್ಕಿಲ್ಲ. ಇದೊಂದು. ಇನ್ನು ಎರಡನೆಯದಾಗಿ ಈಗಾಗಲೇ ಅವರು ರಾಜೀನಾಮೆ ಕೊಟ್ಟಿದ್ದಾರೆ. ಅವರ ರಾಜೀನಾಮೆ ಅಕ್ಸೆಪ್ಟ್ ಆಗಿದೆ. ಅಕ್ಸೆಪ್ಟ್ ಆದರೂ ಕೂಡ ಅವರು ಬರಬೇಕು, ಏಕೆ ಓಡಿ ಹೋಗಿದ್ದಾರೆ ಎಂದರೆ, ಹೇಗೆ? ಅವರು ಮಂತ್ರಿಯಾಗಿ ಓಡಿ ಹೋಗಿಲ್ಲ. ಅವರು ಒಬ್ಬ ವ್ಯಕ್ತಿಯಾಗಿ, ಇದು ಬೇಡ ಅನ್ನಿಸಿತು. ಬೇಜಾರು ಅನ್ನಿಸಿತು, ಅದಕ್ಕಾಗಿ ಇವತ್ತಿನ ದಿವಸ ಅವರು ಸ್ವಯಂಪ್ರೇರಿತವಾಗಿ ರಾಜೀನಾಮೆ ಕೊಟ್ಟಿದ್ದಾರೆಯೇ ಹೊರತು ಯಾರೂ ಕೂಡ ಒತ್ತಾಯ ಮಾಡಿ ರಾಜೀನಾಮೆಯನ್ನು ತೆಗೆದುಕೊಂಡಿಲ್ಲ. ಅವರು ಸ್ವತಃ ರಾಜೀನಾಮೆ ಕೊಟ್ಟು ಇವತ್ತು ಆ ಒಂದು ಪವಿತ್ರವಾದಂತಹ ಸ್ಥಳಕ್ಕೆ ಹೋಗಿದ್ದಾರೆ. ಆದರೆ ಪದೇಪದೇ ಹೀಯಾಳಿಸುವಂತೆ ಮಾತನಾಡತಕ್ಕಂಥಾದ್ದು, ಮೆಕ್ಕಾಗೆ ಓಡಿ ಹೋಗಿದ್ದಾರೆ, ಕದ್ದು ಓಡಿ ಹೋಗಿದ್ದಾರೆ, ಅವರನ್ನು ಕರೆಸಿರಿ, ಹಿಡಿದು ತರಿಸಿರಿ, ಅರೆಸ್ಟ್ ಮಾಡಿಸಿ ಎಂದರೆ ಏನು ಅರ್ಥ? ಅವರ ಮೇಲೆ ಏನಾದರೂ ಚಾರ್ಜ್ ಶೀಟ್ ಹಾಕಿದ್ದಾರಾ? ಅಥವಾ ಸ್ಟಾಂಪಿಟ್ ನವರಾಗಲಿ ಇನ್‌ವೆಸ್ಟಿಗೇಟಿಂಗ್ ಏಜೆನ್ಸಿಯವರಾಗಲಿ ಈಗಾಗಲೇ ಚಾರ್ಜ್ ಶೀಟ್ ಹಾಕಿ ಏನಾದರೂ ಬಹಿರಂಗ ಪಡಿಸಿದ್ದರೆ, ಕೇಸ್ ಇದೆ ಅಂತಹವರನ್ನು ಅರೆಸ್ಟ್ ಮಾಡಿ ಎಂದರೆ ಸರಿ. ಆದರೆ ಇನ್ನು ಏನೂ ಚಾರ್ಜ್ ಶೀಟ್ ಹಾಕಿಲ್ಲ ಏನೂ ಇಲ್ಲ, ಅವರನ್ನು ನೀವೇ ಅಪರಾಧಿ ಸ್ಥಾನದಲ್ಲಿ ನಿಲ್ಲಿಸಿದರೆ ಹೇಗೆ? ಯಾವಾಗ ಚಾರ್ಜ್ ಶೀಟ್ ಹಾಕಿ ನೀವು ಅವರನ್ನು ಅಪರಾಧಿ ಸ್ಥಾನದಲ್ಲಿ ನಿಲ್ಲಿಸಿದಾಗ, ಮುಂದೆ ನಮ್ಮ ಮೇಲೆ ನಿಮಗೆ ನಂಬಿಕೆ ಇಲ್ಲ ಎಂದು ಹೇಳಿ, ಸ್ಟಾಂಪಿಟ್‌ನವರು ಮಾಡಿದಂತಹ ಕೆಲಸಕ್ಕೆ ಒಂದು ಕಳಂಕ ತರತಕ್ಕಂಥ, ಮಸಿಬಳಿಯುವಂತಹ ಕೆಲಸ ತಾವು ಮಾಡಿದಿರಿ; ಮಾಡಿ. ಈಗ ಅದನ್ನು ಸಿಬಿಐಗೆ ಕೊಟ್ಟಿದ್ದೇವೆ. ನಾಳೆ ಅದನ್ನು ಇನ್‌ವೆಸ್ಟಿಗೇಟ್ ಮಾಡುತ್ತಾರೆ. ಅದರಲ್ಲಿ ತಪ್ಪಿತಸ್ಥರು ಯಾರಿದ್ದಾರೆಂದು ಕಂಡರೆ ಅವರೆಲ್ಲರ ಮೇಲೆ ಕ್ರಮ ತೆಗೆದುಕೊಳ್ಳಬಹುದು. ಇನ್ನೊಬ್ಬರ ಮೇಲೆ ತೆಗೆದುಕೊಳ್ಳಬಹುದು. ನಾಳೆ ಮತ್ತೆ ಯಾರಾದರೂ ಕೂಡ BJP ಮುಖಂಡರು ಅದರಲ್ಲಿ ಇದ್ದರೆ ಅವರ ಮೇಲೆ ಕೂಡ ತೆಗೆದುಕೊಳ್ಳಬಹುದು. ಯಾರ ಮೇಲೂ ಎಕ್ಸ್‌ಪ್‌ಷನ್ ಇಲ್ಲ. ಎಲ್ಲರ ಮೇಲೆ ತೆಗೆದುಕೊಳ್ಳುತ್ತಾರೆ. ಅದಕ್ಕಾಗಿ ನೀವು ಇವತ್ತೇ ಅರೆಸ್ಟ್ ಮಾಡಿ, ಅವರನ್ನು ಹಿಡಿದುಕೊಂಡು ಬನ್ನಿ, ಓಡಿಹೋಗಿದ್ದಾರೆ ಎಂದರೆ, ಏನು ಅದಕ್ಕೆ ಕಾನೂನಿನಲ್ಲಿ ಅಂತಹ ಅವಕಾಶ ಇದೆಯಾ? ಎಫ್‌ಐಆರ್ ಇಲ್ಲದೆ, ಚಾರ್ಜ್ ಶೀಟ್ ಇಲ್ಲದೆ ಹೋಗಿ ಹಿಡಿದುಕೊಂಡು ಬರುವಂತಹ ಅವಕಾಶ ಇದ್ದರೆ ಇನ್‌ವೆಸ್ಟಿಗೇಷನ್ ಟೀಮ್‌ನವರು ನೀವು ಇನ್ನು ಏಕೆ ಮಾಡಿಲ್ಲವೆಂದು ಹೇಳಿ ಬೇಕಾದರೆ ನಾಳೆ ಅದರ ಬಗ್ಗೆ ಎನ್‌ಕ್ವೈಯರಿ ಮಾಡಬಹುದು. ಆದರೆ ಸ್ಟಾಂಪಿಟ್‌ನವರು ಇನ್‌ವೆಸ್ಟಿಗೇಷನ್ ಅನ್ನು ನಿಷ್ಪಕ್ಷಪಾತವಾಗಿ ನಡೆಸಿದಾಗ, ಇಲ್ಲಿಯವರೆಗಿನ ವಿಷಯ ನಾನು ಹೇಳುತ್ತೇನೆ, ಮುಂದೆ ಏನಾಗುತ್ತದೆಂದು ನಾನು ಹೇಳುವುದಿಲ್ಲ. ಅದರಲ್ಲಿ ಯಾರಾದರೂ ಕೂಡ ಇರಬಹುದು. ಆದರೆ ಇಲ್ಲಿಯವರೆಗೆ ಅವರ ಮೇಲೆ ಚಾರ್ಜ್ ಶೀಟ್ ಇಲ್ಲ. ಅವರು ಅಪರಾಧಿ ಎಂದು ಎಲ್ಲಿಯೂ ಕೂಡ ಬಂದಿಲ್ಲ. ಆದರೆ ನೀವು ಅವರನ್ನು ಈಗಲೇ ಏಕೆ ಹಿಡಿದುಕೊಂಡು ಬರಲಿಲ್ಲ ಎಂಬುದಕ್ಕೆ ನೀವು ಏನೂ ಹೇಳಿಲ್ಲವೆಂದು ಹೇಳುತ್ತೀರಿ. ಇನ್ನು ಎರಡನೆಯದಾಗಿ ಸಿಬಿಐಗೆ ಏಕೆ ಕೊಟ್ಟಿರಿ ಎಂದು ಕೇಳಿದಿರಿ. ಅದಕ್ಕೆ ಸೋಫಾರ್ ಎಂದು ಹೇಳಿದೆ. ಇಲ್ಲಿಯವರೆಗೆ ನಮಗೆ ಮಾಹಿತಿ ಇಲ್ಲವೆಂದು ಹೇಳಿದೆ. ಇಲ್ಲಿಯವರೆಗೆ ನಮಗೆ ಏನು ಸ್ಟಾಂಪಿಟ್‌ನವರು ಒದಗಿಸಿದ್ದಾರೆ ಅದರ ಪ್ರಕಾರ ಇಲ್ಲಿಯವರೆಗೆ

ಇಲ್ಲ. ಮುಂದೆ ಸ್ಟಾಂಪಿಟ್‌ನವರು ಏನು ಇನ್‌ವೆಸ್ಟಿಗೇಷನ್ ಮಾಡುತ್ತಾರೋ, ಸಿಬಿಐ ನವರು ಏನು ಮಾಡುತ್ತಾರೋ ಅದು ಅವರಿಗೆ ಬಿಟ್ಟಂತಹ ವಿಷಯ. ಅದಕ್ಕಾಗಿ ಈ ವಿಷಯವನ್ನು ನಿಮಗೆ ಈಗಾಗಲೇ ತಿಳಿಸಿದರೂ ಕೂಡ ನಿಮಗೆ ಸಮಾಧಾನವಾಗಲಿಲ್ಲ. ನೀವು ಸಿ.ಬಿ.ಐ.ಗೆ ಏಕೆ ಕೊಟ್ಟಿದ್ದೀರಿ, ಎಂದು ಕೇಳಿದ್ದಿರಿ, ನಾವು ಸಿ.ಬಿ.ಐ.ಗೆ ಏಕೆ ಕೊಟ್ಟಿದ್ದೇವೆಂಬ ಬಗ್ಗೆ ಸ್ಪಷ್ಟವಾಗಿ ನಾನು ಮಾನ್ಯ ಜಸ್ವಂತ್‌ಸಿಂಗ್‌ರವರ ಭಾಷಣವನ್ನು ಸಭೆಯಲ್ಲಿ ಓದಿ ಹೇಳಿ, ಮತ್ತೆ ನಮ್ಮ ಕ್ಯಾಬಿನೆಟ್ ತೀರ್ಮಾನ ಯಾವ ರೀತಿಯಾಗಿ ಆಗಿದೆ, ನಾವು ಏಕೆ ಈ ಕ್ರಮವನ್ನು ರಾಜ್ಯ ಮತ್ತು ರಾಷ್ಟ್ರದ ಹಿತದೃಷ್ಟಿಯಿಂದ ಮತ್ತು ಈ ದೇಶದ ಆರ್ಥಿಕ ಪರಿಸ್ಥಿತಿ ಬುಡಮೇಲು ಆಗುವಂತಹ ಸಂದರ್ಭ ಬಂದಾಗ, ಎಲ್ಲಾ ಕೇಸಸ್‌ಗಳನ್ನು ಒಂದೇ ಅಂಬ್ರೆಲಾ ಕೆಳಗಡೆ ತರಬೇಕೆಂಬ ಭಾವನೆಯಿಂದ ಕೇಂದ್ರ ಸರ್ಕಾರ ಏನು ಪ್ರಯತ್ನವನ್ನು ಮಾಡುತ್ತಿದೆ, ಮತ್ತೆ ಮಾನ್ಯ ಜಸ್ವಂತ್‌ಸಿಂಗ್‌ರವರು ಇವರು ಲೋಕಸಭೆ ಮತ್ತು ರಾಜ್ಯ ಸಭೆಯಲ್ಲಿ ಏನು ಒಪಿನಿಯನ್ ಕೊಟ್ಟಿದ್ದರು, ಅದಕ್ಕೆ ರೆಸ್ಪಾಂಡ್ ಮಾಡಿ ಕೊಟ್ಟಿದ್ದೇವೆ. ಅದು 19ರಲ್ಲಿ ಡಿಬೆಟ್‌ನಲ್ಲಿ ಬಂತು, 26ನೇ ತಾರೀಖಿನಂದು ನಮ್ಮ ಸಚಿವ ಸಂಪುಟ ಸಭೆ ಆಯಿತು, ನಾವು ಒಂದು ವಾರದೊಳಗೆ ತೀರ್ಮಾನವನ್ನು ತೆಗೆದುಕೊಂಡು ನೋಟಿಫಿಕೇಶನ್ ಅನ್ನು ಇಷ್ಯೂ ಮಾಡಿದ್ದೇವೆ, ಇಷ್ಟೆಲ್ಲವನ್ನೂ ಮಾಡಿದರೂ ಸಹಿತ ಇದರ ಬಗ್ಗೆ ಸಮಾಧಾನವಿಲ್ಲವೆಂದು ನೀವು ಹೇಳುತ್ತಿದ್ದೀರಿ, ಇನ್ನು ಮೂರನೆಯದಾಗಿ ಯಾವುದೇ ಸಿಟಿಜನ್ ಕೂಡ piligrimage passport ನಲ್ಲಿ ಮಕ್ಕಾ ಮದೀನಾಕ್ಕೆ ಹೋಗುವಂಥಾದ್ದಕ್ಕೆ ಅವಕಾಶವಿದೆ. ತಮಗೆ ಗೊತ್ತಿರುವ ಹಾಗೆ 60 ದಿವಸಗಳು ಇಲ್ಲಿ ಅಬ್ಸೆಂಟ್ ಇದ್ದರೂ ಕೂಡ ಇಲ್ಲಿ ಪರ್ಮಿಶನ್ ಏನೂ ಬೇಕಾಗುವುದಿಲ್ಲ. ಇದೆಲ್ಲಾ ಇದ್ದರೂ ಕೂಡ, ಒಂದು ಕಡೆ Piligrimage passport ಮೇಲೆ ಹೋಗುವಂತಹ ಸಂಪೂರ್ಣವಾದಂತಹ ಹಕ್ಕು ಆ ಧರ್ಮದಲ್ಲಿ ಇರುವವರಿಗೆ ಇದೆ, ನಡೆದುಕೊಳ್ಳುವವರಿಗೂ ಇದೆ, ಟೂರಿಸ್ಟ್ ವೀಸಾನಲ್ಲೂ ಹೋಗುತ್ತಾರೆ, piligrimage ವೀಸಾನಲ್ಲೂ ಹೋಗುತ್ತಾರೆ, ಅನೇಕ ರೀತಿಯಲ್ಲಿ ಇದು ನನಗೆ ಗೊತ್ತಿರುವ ಮಾಹಿತಿಯ ಪ್ರಕಾರ ಹೋಗಬಹುದು. ಆದರೆ ನೀವು ಇಲ್ಲಿ ನಿಮ್ಮ ಮುಖ್ಯಮಂತ್ರಿಯವರ ಪರ್ಮಿಶನ್ ಇತ್ತೇನು. ಗೌವರ್ನಮೆಂಟ್ ಆರ್ಡರ್ ಇತ್ತೇನು? ಗೌವರ್ನಮೆಂಟ್ ಆಫ್ ಇಂಡಿಯಾ ಆರ್ಡರ್ ಇತ್ತೇನು ಎಂದು ಕೇಳುತ್ತಿದ್ದೀರಿ. ಇಲ್ಲೀಗಲ್ ಆಗಿ ಹೋಗಿದ್ದರೆ ಗೌವರ್ನಮೆಂಟ್ ಆಫ್ ಇಂಡಿಯಾದವರು ಅಲ್ಲೂ ಡೀಟೈನ್ ಮಾಡುತ್ತಿದ್ದರೋ, ಏನೋ, ಎಂದು ನನಗನ್ನಿಸುತ್ತದೆ, ಅವರು ಲೀಗಲ್ ಆಗಿ ಹೋಗಿದ್ದಾರೆಂದು ನಾನು ತಿಳಿದುಕೊಂಡಿದ್ದೇನೆ, ಇದೆಲ್ಲವೂ ಗೊತ್ತಿದ್ದೂ ಇವರು ಕಾಲು ಕೆರೆದುಕೊಂಡು ಜಗಳ ಮಾಡುವಂಥಾದ್ದು ಒಂದೇ ಮಾಡುತ್ತಿದ್ದಾರೆಯೇ, ಹೊರತು, ಬೇರೆ ರೀತಿಯಲ್ಲಿ ಏನೂ ಹುರುಳಿಲ್ಲ, ಇಲ್ಲಿ ಇವರು ಬೇರೆ ವಿಷಯಗಳನ್ನು ಪ್ರಸ್ತಾಪ ಮಾಡಲಿ, ಇನ್ನೂ ಅನೇಕ ವಿಷಯಗಳು ಇವೆ. ನಾವು ಈ ಸದನವನ್ನು ಕರೆದದ್ದು ಏಕೆ? ನೀವು ಇಲ್ಲಿ ಮುಕ್ತವಾಗಿ ಚರ್ಚೆ ಮಾಡಲಿ ಎಂದು ಹೇಳಿ ಕರೆದಿದ್ದೇವೆ, ನಾವು ಏಕೆ ಹಠವನ್ನು ಹಿಡಿಯಲಿಲ್ಲ, ಇಲ್ಲಿ ಮುಕ್ತವಾಗಿ ಚರ್ಚೆ ನಡೆದು, ಅದಕ್ಕೆ ಸರ್ಕಾರದಿಂದ ಉತ್ತರವನ್ನು ತೆಗೆದುಕೊಳ್ಳಲಿ, ಮತ್ತೆ ಮುಂದೆ ಏನು ನೀವು ವಿಷಯಗಳನ್ನು ಪ್ರಸ್ತಾಪ ಮಾಡುತ್ತೀರಿ, ಅದಕ್ಕೂ ನಾವು ಉತ್ತರವನ್ನು ಕೊಡೋಣ ಎನ್ನತಕ್ಕ ದೃಷ್ಟಿಯಲ್ಲಿ ನಾವು ಅವರು ನಿಲುವಳಿ ಸೂಚನೆಯನ್ನು ತಂದಿರುವಂಥಾದ್ದಕ್ಕೆ, ನಾವೂ ಕೂಡ ತಮ್ಮಲ್ಲಿ ರಿಕ್ವೆಸ್ಟ್ ಮಾಡಿಕೊಂಡು, ತಾವು ಯಾವುದೇ ಫಾರಂನಲ್ಲೂ, ಅದು ಚರ್ಚೆಗೆ ಬಂದರೂ, ನಾವು ಉತ್ತರವನ್ನು ಕೊಡುವುದಕ್ಕೆ ತಯಾರಿದ್ದೇವೆಂದು ಹೇಳಿ, ತಾವು ಇದಕ್ಕೆ ಎರಡು ತಾಸು ಕೊಡಿ, ನಾಲ್ಕು ತಾಸು ಕೊಡಿ, ಒಂದು ದಿವಸ ಕೊಡಿ, ಎರಡು ದಿವಸ ಕೊಡಿ, ಇದು ಚರ್ಚೆಯಾದ ಮೇಲೆ ನಾವು

ಉತ್ತರವನ್ನು ಕೊಟ್ಟಿದ್ದೇವೆ, ನಮ್ಮ intention interfere ಮಾಡಬೇಕಾಗಿದ್ದರೆ, ಅದೇ ದಿವಸ, ಅದೇ ಘಳಿಗೆಯಲ್ಲೇ, ಮೊನ್ನೆ ದಿವಸವೇ ಇದು ಸರಿಯಿಲ್ಲವೆಂದು ಮಾಡುತ್ತಿದ್ದೆವು; ನಾವು ಇದನ್ನು ಏನೂ ಮುಚ್ಚಬೇಕಾಗಿಲ್ಲ, ನಾವು ಡಿಫೆಂಡ್ ಮಾಡಬೇಕಾಗಿಲ್ಲ, ಕಾನೂನಿನ ಪ್ರಕಾರ, ಯಾರ್‍ಯಾರ ಮೇಲೆ ಕಾನೂನಿನ ಪ್ರಕಾರ ಕ್ರಮವನ್ನು ಜರುಗಿಸಬೇಕೋ ಅದನ್ನು ಜರುಗಿಸುತ್ತೇವೆ. ಇದರಲ್ಲಿ ಯಾರೂ ಕೂಡ ಸಂಶಯ ಇಟ್ಟುಕೊಳ್ಳಬಾರದು, ಆದರೆ ರಾಜಕೀಯ ಉದ್ದೇಶದಿಂದ ಈ ಇಷ್ಯೂವನ್ನು ಜೀವಂತವಾಗಿ ಇಡಬೇಕೆಂದು, ಇದರಿಂದ ನಮ್ಮ ರಾಜಕೀಯ ಬೇಳೆ ಬೇಯುತ್ತದೆನ್ನುವಂತಹ ಭಾವನೆ ಇದ್ದರೆ, ಅದು ತಪ್ಪು; ಈ ರಾಜ್ಯದ ಜನತೆಗೂ ಗೊತ್ತಿದೆ, ಇಲ್ಲಿ ಒಳ್ಳೆಯದು ಯಾವುದು? ಕೆಟ್ಟದ್ದು ಯಾವುದು? ಸರ್ಕಾರ ಎಷ್ಟು ಪ್ರಾಮಾಣಿಕ ಪ್ರಯತ್ನ ಮಾಡುತ್ತಿದೆ, ಎನ್ನುವುದು ಜನರಿಗೆ ಈಗಾಗಲೇ ಗೊತ್ತಾಗಿದೆ, ಇವರ ಅಪಪ್ರಚಾರಕ್ಕೆ ಜನರು ಬಲಿ ಬೀಳುವುದಿಲ್ಲ; ಮತ್ತೆ ಇವರ ಬಂಡವಾಳ ಎಷ್ಟು ಉಳಿದಿದೆ, ಅಷ್ಟೇ ಉಳಿಯುತ್ತದೆ, ಈ ಬಂಡವಾಳ ಏನೂ ಹೆಚ್ಚಿಗೆ ಆಗುವುದಿಲ್ಲ, ಇವರ ಬಂಡವಾಳ ಕರಗುತ್ತದೆಯೇ, ಹೊರತಾಗಿ ಹೆಚ್ಚಿಗೆ ಆಗುವಂತಹ ಸಾಧ್ಯತೆ ಇಲ್ಲ, ಅದಕ್ಕಾಗಿ ಮಾನ್ಯ ಅಧ್ಯಕ್ಷರೇ, ಅವರು ಏನು ಮೂರು ಪಾಯಿಂಟ್‌ಗಳನ್ನು ಕೇಳಿದ್ದರು, ಅದನ್ನು ಸಭೆಯ ಮುಂದಿಟ್ಟಿದ್ದೇನೆ, ಈಗ ಅವರಿಗೆ ಸಮಾಧಾನವಾಗಿರಬಹುದು.

(ಗೊಂದಲ)

ಅಧ್ಯಕ್ಷರು : ಇಲ್ಲಿ ಬೇಕಾದಷ್ಟು ವಾದ ವಿವಾದಗಳು ಆಗಿದೆ, ಸಭೆಯ ನಡವಳಿಗಳು ನಡೆಯುವುದಕ್ಕೆ ದಯಮಾಡಿ ತಾವೆಲ್ಲರೂ ಅಪ್ಪಣೆ ಕೊಡಿ, ತಾವೆಲ್ಲರೂ ಸಹಕರಿಸಬೇಕು.

(ಗೊಂದಲ)

ಇಲ್ಲಿ ವಾತಾವರಣ ಸರಿಯಾಗಿ ಇಲ್ಲ, ನನಗೆ ಬೇರೆ ವಿಧಿ ಇಲ್ಲ, ಈಗ ಸದನವನ್ನು ಮುಂದೂಡುತ್ತಿದ್ದೇನೆ. ಸದನವು ಸೋಮವಾರ ಬೆಳಿಗ್ಗೆ 10.30ಕ್ಕೆ ಸಮಾವೇಶಗೊಳ್ಳುತ್ತದೆ.

(ಸದನವು ಮಧ್ಯಾಹ್ನ 1 ಗಂಟೆ 45 ನಿಮಿಷಕ್ಕೆ ಮುಂದೂಡಲ್ಪಟ್ಟು ಪುನಃ ದಿನಾಂಕ 12ನೇ ಜನವರಿ ಮಾಹೆ 2004ರ ಸೋಮವಾರದಂದು ಬೆಳಿಗ್ಗೆ 10.30 ಗಂಟೆಗೆ ಸೇರಲು ನಿಶ್ಚಯಿಸಿತು)

***

ನಿರ್ದೇಶಕರು, ಮುದ್ರಣ, ಲೇಖನ ಸಾಮಗ್ರಿ ಮತ್ತು ಪ್ರಕಟಣೆಗಳ ಇಲಾಖೆ, ಬೆಂಗಳೂರು.